




# ಕವೀಂದ್ರ ರವೀಂದ್ರರು

ಪಂಚಾಕ್ಷರಿ ಹಿರೇಮಠ

ಸಾಹಿತ್ಯ ಭಂಡಾರ

# ಕವೀಂದ್ರ ರವೀಂದ್ರರು

ಕವಿ–ಕಾವ್ಯ ದರ್ಶನ



ಪಂಚಾಕ್ಷರಿ ಹಿರೇಮಠ



ಲಲಿತ ಸಾಹಿತ್ಯ ಮಾಲಾ

ಲಲಿತ ಸಾಹಿತ್ಯ ಮಾಲೆ, ಧಾರವಾಡ.

Kannada
KAVINDR RAVINDRARU
( A Study on Tagore's Poetry )

*by*
Panchakshari Hiremath





*Cover Design by*
Krishna Potdar

*Published by*
Lalita Sahityamala Dharwar

*Printed by*
Lalita Mudranalaya Dharwar

First Published in January 1965

**Price : Ps. 75**



ಓ! ಎನ್ನ ಪ್ರಾಣ ಪುರುಷ
ಎನ್ನ ಮನದಲಿ
ಎನ್ನ ಚಿತ್ತದಲಿ
ಎನ್ನ ಸರ್ವಾಂಗದಲೂ
ಒತ್ತು, ನಿನ್ನ ಪಾದಮುದ್ರೆ!

—ಪಂಚಾಕ್ಷರಿ

# ಮುನ್ನುಡಿ

ರವೀಂದ್ರರು ವಿಶ್ವಪೂಜ್ಯರಾದ ಕವೀಂದ್ರರು. ಅವರ ಸುವಿಶಾಲ ಹಾಗೂ ಸಮುಜ್ವಲ ವ್ಯಕ್ತಿತ್ವಕ್ಕೆ ಮಾರುಹೋಗದವರಾರು ? ಆ ಕವಿಯ 'ಕಾವ್ಯ ದರ್ಶನ' ಮಾಡಿಕೊಂಡು ಪಡೆದ 'ಪರಿಣಾಮ ಪ್ರಸಾದವನ್ನು' ನೀಡಬಲ್ಲ ಗ್ರಂಥಕ್ಕೆ ಯಾರು ತಾನೇ ಮನ್ನಣೆಯನ್ನು ಸಲ್ಲಿಸರು ? ಅಂತಹ ಗ್ರಂಥಕ್ಕೆ ಮುನ್ನುಡಿ ಬರೆಯುವುದೆಂದರೆ ಅದೊಂದು ತಾನಾಗಿ ಬಂದ ಆನಂದ ಭಾಗ್ಯ. ಶ್ರೀ ಪಂಚಾಕ್ಷರಿ ಹಿರೇಮಠರವರಂತಹ ಕವಿ-ಮಿತ್ರರಿಂದ ರಚಿತವಾಗಿ ರಸಾನುಭೂತಿಯನ್ನು ತುಂಬಿತಂದ ಹೊತ್ತಿಗೆಯಲ್ಲಿ ಕೆಳೆನುಡಿ ಮೂಡಿಸುವ ಸಂದರ್ಭ ನನಗೆ ಒದಗಿ ಬಂದುದು ಸಹಜ ಆನಂದಾನುರಾಗ ಪೂರ್ಣವಾದ ಒಂದು ಸುಯೋಗ.

*"ಶ್ರೀ ಪಂಚಾಕ್ಷರಿ ಹಿರೇಮಠ ಅವರು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಸುಪರಿಚಿತರು........ಅವರು ಈಗಾಗಲೇ ಕಾವ್ಯ, ಕತೆ, ನಾಟಕ, ನಿಬಂಧ ಮುಂತಾದ ಸಾಹಿತ್ಯರಚನೆ ಮಾಡಿ ಹೆಸರು ಗಳಿಸಿದ್ದಾರೆ........ಆಳವಾದ ಅಭ್ಯಾಸ, ಸುಂದರವಾದ ಭಾಷಾ ಶೈಲಿ...., ಘನವಾದ ಆದರ್ಶ" ಇವುಗಳಿಂದ ಪಂಚಾಕ್ಷರಿಯವರ ಬರವಣಿಗೆ ಶಕ್ತಿಯುತವಾಗಿದೆ. ನಾನು ಓದಿದ್ದ ಅವರ 'ಚೈತ್ಯಾಕ್ಷಿ' ಎಂಬ ಭಾವಗೀತ ಸಂಗ್ರಹ ಅವರ ಕಾವ್ಯಾಕ್ಷಿಗೆ, ಕಾವ್ಯ ನಿರ್ಮಾಣ ಶಕ್ತಿಗೆ ಸಾಕ್ಷಿಯಾಗಿದೆ.

'ಕವೀಂದ್ರ ರವೀಂದ್ರರು ಎಂಬ ಹೆಸರಿನಲ್ಲಿ ಇದೀಗ ಪ್ರಕಟವಾಗುತ್ತಲಿರುವ ಶ್ರೀ ಹಿರೇಮಠ ಅವರ ಚಿಕ್ಕದಾದರೂ ಚೊಕ್ಕ ಚಿನ್ನದಂತಿರುವ ಈ ಹೊತ್ತಿಗೆ ಅವರ ಸಾಹಿತ್ಯದ ಹೃದ್ಯತೆಯನ್ನು ಎತ್ತಿ ತೋರುವಂತಿದೆ. ಕವಿ-ರವೀಂದ್ರರ ಬಗೆಗೆ ಬರೆಯುವವರಿಗೆ ಇರಬೇಕಾದ ರಸಾನುಭವದೃಷ್ಟಿ ಹಾಗೂ ಶಕ್ತಿಶ್ರೀ ಪಂಚಾಕ್ಷರಿಯವರಿಗೆ ಉಂಟು. ಅವರ ರಸಾನುಭವದೃಷ್ಟಿ ಈ ಹೊತ್ತಿಗೆಯ ಪುಟ ಪುಟಗಳಲ್ಲಿ ಗೋಚರವಾಗುತ್ತಿದೆ. ಈ ಅನುಭವವನ್ನು ಅಭಿವ್ಯಕ್ತಿಗೊಳಿಸಬಲ್ಲ ಶಕ್ತಿಯಂತೂ ಅವರಲ್ಲಿ ಇದ್ದೇ ಇದೆ. ಭಾವಜೀವನದಿಂದ ಸುಳಿದುಬಂದ ಗಂಧವನ್ನು ಅವರ ಪದ್ಯ ಶೈಲಿಯಲ್ಲಿ ಹೇಗೋ ಹಾಗೆ ಗದ್ಯ

* ಶ್ರೀ ಎಸ್. ಎಸ್ ಒಡೆಯರ "ನೀ ರುದ್ರನಾಗು" ಮುನ್ನುಡಿ ಪು. i, iv.

ಶೈಲಿಯಲ್ಲೂ ಗುರುತಿಸಬಹುದು. ಅವರು ಆಯ್ದುಕೊಂಡ ವಸ್ತು ಅವರ ಭಾವನಾಪ್ರಧಾನವಾದ ಶೈಲಿಗೆ ತಕ್ಕ ಆಮಂತ್ರಣವನ್ನು ನೀಡಿದೆ. ಈ ಹೊಂದಾಣಿಕೆಯಿಂದ ಅವರ ಬರವಣಿಗೆಗೆ ಹೆಚ್ಚಿನ ಅಂದವುಂಟಾಗಿದೆ. ಅಗುಳಿನ ಮೇಲಿಂದ ಅನ್ನವನ್ನರಿಯುವಂತೆ ಗುರಿ ಮುಟ್ಟುವ ಅವರ ವ್ಯಕ್ತಿ ಚಿತ್ರಣದ ಪರಿಯನ್ನು ಅರಿಯಬಹುದು ಗ್ರಂಥದ ಆರಂಭದ ಈ ವಾಕ್ಯ ವೃಂದದಿಂದ.

"ಆತ................

ಪ್ರಶಾಂತ ಚೆಲುವೊಗದ, ಹೊಳಪುಳ್ಳ ಕಣ್ಣುಳ್ಳ, ಬೆಳ್ಳಿಗಡ್ಡದ, ನಿಲುವಂಗಿಯ, ನಿಲವುಳ್ಳ ಆತ ಒಟ್ಟಿನಲ್ಲಿ ರಸಋಷಿ. ಒಮ್ಮೆ ಕಣ್ತೆರೆದು ನೋಡಿದನೋ ಭುವನ ಪಾವನ, ಮುಗುದೊಮ್ಮೆ ತೆರೆದನೋ ಕಾವ್ಯ ಲೋಕದ ರಸ ಸೃಷ್ಟಿ" ಈ ಮುಂದೆ ಆ ವ್ಯಕ್ತಿಯ ಅಂತರಂಗದ ವ್ಯಾಪ್ತಿ ಯನ್ನು ಒಮ್ಮೆಲೇ ದೀಪಿಸುವ ರೀತಿ ಹೀಗಿದೆ– "ಆತ ಕವಿ, ದಾರ್ಶನಿಕ, ಕಲಾವಿದ, ಶಿಕ್ಷಣತಜ್ಞ, ನಟ ಇನ್ನು ಏನೆಲ್ಲವೂ ಆದ ಆತ ಎಲ್ಲಕ್ಕೂ ಹೆಚ್ಚಾಗಿ ಪ್ರೇಮಯೋಗಿ. ಈ ಮಣ್ಣಿನ ಪ್ರೀತಿಯ ಮೂಲಕ ವಿಶ್ವವನ್ನೇ ಪ್ರೀತಿಸಿದ. ಭಾರತೀಯ ಸಂಗೀತ ಲೋಕಕ್ಕೆ ಹೊಸ ಸಂಗೀತ ಪದ್ಧತಿಯನ್ನು ನೀಡಿದ ಆತ–ಸ್ವರ ಸಾಮ್ರಾಟ........

....ಆತ ರವೀಂದ್ರನಾಥ ಠಾಕೂರ."

ವಿಷಯವ್ಯಾಪ್ತಿ ಹಿರಿದಾದರೂ ಕಿರಿ ವ್ಯಾಪ್ತಿಯಲ್ಲಿ ಅದನ್ನು ಚದುರು ಚಿತ್ರಣ ಶೈಲಿಯ ಮೂಲಕ ಥಳ್ಳನೆ ಬೆಳಗುವ ಹದ ಇಲ್ಲಿದೆ. ಇಲ್ಲಿರುವುದು ಕವಿ ರವೀಂದ್ರರ ಚರಿತ್ರಾತ್ಮಕವಾದ ಪರಿಚಯವಲ್ಲ. ಇದು ಗುರು-ದೇವ ಕವಿಯ ಒಳ ಹೊರಗಣ ನಿಲುವಿನ ನೋಟ, ವ್ಯಕ್ತಿತ್ವದ ದರ್ಶನ; ಎಂಬು ದನ್ನು ಮನದಂದರೆ ಈ ಬಗೆಯ ರಸದೃಷ್ಟಿಯ ಬರವಣಿಗೆಯ ಔಚಿತ್ಯದ ಅರಿವಾದೀತು. ಈ ಬೆಳಕಿನಲ್ಲಿ ಈ ಹೊತ್ತಿಗೆಯ ಅವಲೋಕನವಾಗುವುದು ವಿಹಿತ.

ಕುಂಚದ ಕೇವಲ ನಾಲ್ಕಾರು ಎಳೆತಗಳಿಂದ ಕವೀಂದ್ರ ರವೀಂದ್ರರ ಆಹುಪರ ರೂಪದರ್ಶನಮಾಡಿ ಆ ನಿಲವಿಗೆ ನೆಲೆಯಾದ ಅಂತರಂಗ ಸ್ವರೂಪ

ವನ್ನು ಅದೇ ಸಂಕ್ಷಿಪ್ತವಾದ ಆದರೆ ತನ್ನಷ್ಟಕ್ಕೆ ತಾನು ಪೂರ್ಣವಾದ ಹಾಗೂ ಪರಿಣಾಮಕಾರವಾದ ರೀತಿಯಲ್ಲಿ ಬಗೆಗೆತ್ತಿ ತೋರಿದ್ದಾರೆ ಶ್ರೀ ಪಂಚಾಕ್ಷರಿ ಹಿರೇಮಠ ಅವರು. ಕವಿಯ ವಿವಿಧ ಮುಖಗಳೊಡನೆ ಅವನ ಕಾವ್ಯದ ಮುಖ್ಯ ಲಕ್ಷಣಗಳನ್ನು ಮನಂಬುಗುವಂತೆ ನುಡಿಯಲ್ಲಿ ಸುಳುಹುಗೊಳಿಸುವ ಚತುರಿಗೆ ಈ ಲೇಖನ ಕಲೆ ಉದಾಹರಣೆಯಾಗಿದೆ. ಲೇಖಕರ ಸ್ವಾಭಾವಿಕ ಚಿತ್ತವೃತ್ತಿ, ಅನುಭಾವ, ರುಚಿ, ಅಭಿರುಚಿ, ಮತಿ, ವ್ಯಾಸಂಗ ಹಾಗೂ ಆಲೋಚನೆಗಳ ಸಂಗಮದಿಂದ ಬೆಳೆದ ಬುದ್ಧಿ ಎಲ್ಲಕ್ಕೂ ಹೆಚ್ಚಾಗಿ ರಸಾನುಭೂತಿ ಇವೆಲ್ಲ ಹದುಳವಾಗಿ ಹದಗೊಂಡಾಗ ಸೃಜನಶಕ್ತಿ ಉಂಟಾಗುತ್ತದೆ. ಈ ಹದವನ್ನೂ ಹದನವನ್ನೂ ಬಲ್ಲವರು ಇಲ್ಲಿ ಕಾಣಬಹುದು.

ರವೀಂದ್ರರ ಪ್ರಕಾಶಮಯ ಹಾಗೂ ಮಾಧುರ್ಯಮಯ ವ್ಯಕ್ತಿತ್ವದ ದಿಗ್ದರ್ಶನ ಮಾಡುತ್ತ ಅವರ ಪ್ರವೃತ್ತಿಪರ ರಸ ಚಿತ್ತವೃತ್ತಿ, ಏಕಕಾಲಕ್ಕೆ ಆಧುನಿಕವೂ. ಪ್ರಾಚೀನವೂ ಆದ ಅವರ ಚೇತನೆಯ ಗುಣ ವೈಶಿಷ್ಟ್ಯ, ಅವರ ಗೀತಗಳಲ್ಲಿ ಪ್ರತಿಬಿಂಬಿತವಾದ ಪರಮಾನುಭವದ ಪರಿ, ಇವುಗಳನ್ನು ಲೇಖಕರು ಬಗೆಗೆ ಎತ್ತಿ ಹಿಡಿದಿದ್ದಾರೆ. “ರವೀಂದ್ರರ ಗೀತಗಳು ಸೀಮಾತೀತವಾದ ಸತತವಾದ ಆತ್ಮ ಚೈತನ್ಯದ, ಸತ್ಯದ ಸೂಕ್ಷ್ಮ ಧ್ವನಿಗಳು, ಬೆಳಕಿನ ಕಿರಣಗಳು. ಅವರ ಕಾವ್ಯವಾಣಿಯಲ್ಲಿ, ದರ್ಶನ ಚಿಂತನದಲ್ಲಿ, ಈ ಯುಗದ ವಿಶ್ವಮಾನವನ ಸಂವೇದನೆ, ಭಾರತದ ಅಂತರಾತ್ಮನ ಪ್ರಕಾಶ, ಒಂದು ಸರ್ವಾಂಗೀಣ ಜೀವನ ದರ್ಶನ ರೂಪದಲ್ಲಿ ವ್ಯಕ್ತಗೊಂಡಿರುವುದನ್ನು ಕಾಣುತ್ತೇವೆ” ಎಂದು ಲೇಖಕರು ರವೀಂದ್ರರ ಗೀತ ರಹಸ್ಯಗಳನ್ನು ಮನಕ್ಕೆ ತಂದಿದ್ದಾರೆ. ಭಾರತದ ಬಗೆಗೆ ರವೀಂದ್ರರು ಇಡ ಅಪಾರ ಭಕ್ತಿಯ ನೆಲೆಯಲ್ಲಿ ವಿಶ್ವಮಾನ್ಯ ಕವಿಯಾಗಿ ಅವರು ನಿಂತ ನಿಲವು ಈ ಕೃತಿಯಲ್ಲಿ ಚೆನ್ನಾಗಿ ಪ್ರತಿಬಿಂಬಿತವಾಗಿದೆ. ರಸದೃಷ್ಟಿ ಅನುರಾಗಪೂರ್ಣವಾದ ಅಭ್ಯಾಸ ಕಿರಿ ಗಾತ್ರದ ಈ ಗ್ರಂಥದ ಪುಟ ಪುಟದಲ್ಲಿ ಪಡಮೂಡಿಸಿ ಸಂಯಮ ಈ ಕೃತಿಯ ಸೂತ್ರವಾದಂತಿದೆ.

ಶ್ರೀ ಪಂಚಾಕ್ಷರಿ ಹಿರೇಮಠ ಅವರು ತಾವು ಬರೆದ ಈ ರವೀಂದ್ರ ದರ್ಶನ ಕೃತಿಗೆ ನಿದರ್ಶನವೆಂಬಂತೆ ತಮ್ಮ ನೆಚ್ಚಿನ ಕವಿಶ್ರೇಷ್ಠನ ಕೆಲವೊಂದು ಗೀತಗಳನ್ನು ಗ್ರಂಥದ ಉತ್ತರ ಭಾಗದಲ್ಲಿ ಅನುವಾದಿಸಿ ಜೋಡಣೆಗೊಳಿಸಿದುದು

ತುಂಬಾ ಸಮಂಜಸವಾಗಿದ್ದಂತೆ ಸಾರ್ಥಕವೂ ಆಗಿದೆ. 'ರವೀಂದ್ರರ ಗೀತ ಗಳು' ಎಂಬ ಈ ಭಾಗದಲ್ಲಿ ಗುರುದೇವರ ಹತ್ತೊಂಬತ್ತು ಗೀತಗಳ ಅನುವಾದಗಳು ಸಮಾವೇಶವಾಗಿವೆ. ರವೀಂದ್ರರ ವಿಶಾಲವಾದ ರಸಪೂರ್ಣ ಜೀವನದ ವಿವಿಧ ಮುಖಬಿಂಬಗಳ ಪ್ರತಿಬಿಂಬಗಳಂತಿವೆ ಈ ಗೀತಾನುವಾದ ಗಳು. ಗುರುದೇವರ ಮಧುರ ಬಂಧುರ ಭಾವನೆ ಕಲ್ಪನೆಗಳ ಚಿತ್ರಮಯ ದರ್ಶನವನ್ನು ಈ ಗೀತಗಳು ಕನ್ನಡಿಸಿವೆ. ನೂರು ವರುಷಗಳ ನಂತರ ಎಂಬ ಕಲ್ಪನೆಯ ಕೋಲ್ಮಿಂಚಿನಿಂದ ಪ್ರಾರಂಭವಾಗಿ ಕೊಳಲಿನಲ್ಲಿ ಪ್ರಾಣ ತುಂಬಿ ಪಡೆದ ಅನುಭವ, ಆತನ ಹೃದಯ ಪ್ರಾಂಗಣದಲ್ಲಿ ನಡೆದ ರಿಂಗಣದ ರೀತಿ, ಅನಾದಿ ಕಾಲದಿಂದ ಬಂದ ಕವಿಯಾತ್ರಿಕನು ಲೋಕ ಲೋಕಾಂತರದಲ್ಲಿ ಸ್ವಚ್ಛಂದವಾಗಿ ವಿಹರಿಸಿದ ಅಂದ, ದೂರವಿದ್ದರೂ ಹತ್ತಿರದಿಂದ ಹತ್ತಿರವಿದ್ದರೂ ದೂರದಿಂದ ಚಿತ್ತವನ್ನು ಎಚ್ಚರಿಸುವ ಪರಾತ್ಪರ ವಾಣಿಯ ನಿನಾದದ ಅನು ಭವ, ವೈರಾಗ್ಯದ ನಿಷ್ಫಲ ಶೋಧ, ಅನುಭವಿಸಿದ ಅನಿರ್ವಚನೀಯ ಜ್ಯೋತಿ ರ್ಮಯ ಭವಿಷ್ಯ, ಪೃಥಿವಿಯ ಶುಭಕವಿ ತಾನೆಂಬ ಭಾವನೆಯ ಸ್ಫುರಣ, ಪ್ರಭಾತ ದರ್ಶನದಿಂದ ಎಚ್ಚತ್ತ ಚೇತನದ ಪ್ರಸನ್ನತೆ ಇವೆಲ್ಲ ಅಲೆ ಅಲೆಗಳಲ್ಲಿ ಸುಳಿದು ನಾನು ಅಂದೇ ಜನ್ಮವೆತ್ತಿರೆ, ಎಂಬ ಆವೇಶದಲ್ಲಿ ಉಳಿದು ನಿಂದ ಕವಿಯ ಸುರಮ್ಯ ಚಿತ್ತಕ್ಷೇತ್ರದ ದರ್ಶನವನ್ನು ಲೇಖಕರು ಇಲ್ಲಿ ಮಾಡಿಸಿದ್ದಾರೆ.

ಭಾವಜೀವಿಗಳಾದ ಹಾಗೂ ಕವಿಗಳಾದ ಶ್ರೀ ಪಂಚಾಕ್ಷರಿ ಅವರಿಗೆ ಇಲ್ಲಿಯ ಕಾವ್ಯಾನುವಾದಗಳು ತಾವಾಗಿ ಒಲಿದು ಬಂದಿವೆ. ಅವುಗಳಲ್ಲಿ ಸರಾಗವಾಗಿ ಹಾಗು ಗೆಲುವೊಗವಾಗಿ ಹರಿದುಬಂದ ಅಂದವಾದ ಶೈಲಿ ಈ ಮಾತಿಗೆ ನಿದರ್ಶನ. ಅವುಗಳ ಸಹಜ ಸರಾಗತೆಗೆ ಸಾಕ್ಷಿಯಾಗಿ ಇಲ್ಲಿ ಒಂದು ಪದ್ಯವನ್ನು ಉದ್ಧರಿಸಬಹುದು:

ಏಳು ಬಾ ಓ ಕವಿಯೆ
ಇದೆಯೆ ಪ್ರಾಣದಿ ಚೇತನ
ಅಂತರಂಗದಿ ಚಿಂತನ ?
ಬಗೆಯೊಳಿರ್ದೊಡೆ ಸ್ಪಂದನ
ಅದನಿಂದು ಮರ್ತ್ಯದಲಿ ಒಡಮೂಡಿಸು
ಈ ನೆಲದೊಳದನಿಂದು ಅಮರಗೊಳಿಸು!

ಗೀತದ ಪ್ರಾರಂಭದ ಛಂದೋಗತಿಯಲ್ಲಿ ಮಧ್ಯೆ ಮಧ್ಯೆ ಇನ್ನೊಂದು ಛಂದೋಗತಿಯು ತಾನವನ್ನು ಬಳಸಿ ವೈವಿಧ್ಯದ ಸ್ವಾರಸ್ಯವನ್ನು ಅಲ್ಲಲ್ಲಿ ಸುಳುಹುಗಾಣಿಸಿವ್ದಾರೆ. ಈ ಅನುವಾದ ಗೀತಗಳು ಪಂಚಾಕ್ಷರಿ ಅವರ ರಸ ಪ್ರಜ್ಞೆಯನ್ನೂ ಎತ್ತಿ ತೋರುವಂತಹಗಳು. ಅನುವಾದಕ್ಕೆ ಬಳಸಿದ ಛಂದಸ್ಸು ಅತಿ ನಿರ್ಬಂಧದಿಂದ ಮುಕ್ತವಾದುದು. ಅನುವಾದಕರು ಇತ್ತ ಲಯಕ್ಕೆ ಪೂರ್ತಿಯಾಗಿ ಕಟ್ಟುಬಿದ್ದಿಲ್ಲ, ಅತ್ತ ಅದರ ಕೈಬಿಟ್ಟಿಲ್ಲ. ಹೀಗೆ ನಡುವಣ ಬಗೆಯ ಒಂದು ನಯು ಇಲ್ಲಿ ರಾಗದೋರಿವೆ. ಈ ಬಗೆಯಲ್ಲಿ ಅದರವೇ ಆದ ಸೊಗಸಿವೆ. ಈ ಗೀತಗಳು ಅನುವಾದಗಳೆಂದು ತೋರದಂತೆ ಸ್ವಾಭಾವಿಕವಾಗಿ ಸುಳಿದುಬಂದಿವೆ ಇವುಗಳ ಛಂದ ಹಾಗು ಶೈಲಿ. ಇದೇ ಹೊಂದಾಣಿಕೆಯ ಬಗೆಯಲ್ಲಿ ರವೀಂದ್ರರ ಇನ್ನೂ ಕೆಲವು ಗೀತಗಳ ಭಾವಾನುವಾದಗಳನ್ನು ಶ್ರೀ ಪಂಚಾಕ್ಷರಿಯವರು ಕನ್ನಡಕ್ಕೆ ಕಾಣಿಕೆ ಕೊಡುವಂತಾಗಲಿ ಎಂದು ನಾನು ತುಂಬು ಮನದಿಂದ ಆಶಿಸುತ್ತೇನೆ.

ಶ್ರೀ ಪಂಚಾಕ್ಷರಿ ಹಿರೇಮಠ ಅವರ ಸಾಹಿತ್ಯ ಸಕಲರಿಗೂ ಸ್ವಾಗತಾರ್ಹ ವಾದುದು. ಚಿತ್ತವನ್ನು ಎತ್ತಿ ನಿಲ್ಲಿಸಬಲ್ಲ ಚೇತನವೇ ಈ ಹೊತ್ತಿಗೆಯ ವಸ್ತುವಾದಾಗ ಇದನ್ನು ಎಲ್ಲರೂ ಆನಂದದಿಂದ ಬರಮಾಡಿಕೊಳ್ಳುವರೆಂಬ ಬಗೆಗೆ ಸಂದೇಹವಿರದು. ನನ್ನ ತರುಣ ಮಿತ್ರರಾದ ಈ ಸಾಹಿತಿಗೆ ಅವರಿ ಗಿಂತಲೂ ವಯಸ್ಸಿನಲ್ಲಿ ಹಿರಿಯನಾದ ನಾನು ಎಲ್ಲ ಗೆಲವನ್ನೂ ಬಯಸುತ್ತೇನೆ.

ಶ್ರೀ ಕಾಡಸಿದ್ಧೇಶ್ವರ ಕಾಲೇಜು
ಹುಬ್ಬಳ್ಳಿ
೧೮-೧-೧೯೬೫

—ಡಿ. ಎಸ್. ಕರ್ಕಿ

# ಪ್ರಕಾಶಕರ ಮಾತು

ನಮ್ಮ ಗ್ರಂಥಮಾಲೆಯ ಬಿಡಿಮುತ್ತಾಗಿ ಈ 'ಕವೀಂದ್ರ ರವೀಂದ್ರರು' ಎಂಬ ಕಿರುಹೊತ್ತಿಗೆಯನ್ನು ವಾಚಕ ಲೋಕಕ್ಕೆ ಅರ್ಪಿಸಲು ನಮಗೆ ಅತ್ಯಂತ ಅಭಿಮಾನವೆನಿಸುತ್ತದೆ.

ಇದನ್ನು ಬರೆದ ಶ್ರೀ ಪಂಚಾಕ್ಷರಿ ಹಿರೇಮಠ ಅವರು ಗುರುದೇವ ಠಾಕೂರರ ಅತ್ಯಂತ ಅಭಿಮಾನಿಗಳೂ ಅವರ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿದವರೂ ಆಗಿದ್ದಾರೆ. ಕಾರಣ ಈ ಪುಸ್ತಕದ ಮೌಲ್ಯಮಾಪನವನ್ನು ಮಾಡಬೇಕಾದುದಿಲ್ಲ.

ತಮ್ಮ ಈ ಅಮೌಲ್ಯ ಕೃತಿಯನ್ನು ನಮ್ಮ ಮಾಲೆಯಲ್ಲಿ ಪೋಣಿಸಿಕೊಳ್ಳಲು ಅನುಮತಿ ಇತ್ತುದಕ್ಕೆ ಮತ್ತು ಈ ಪುಸ್ತಕದ ಹೊದಿಕೆ ಪುಟದ ಪಡಿಯಚ್ಚುಗಳನ್ನು ಒದಗಿಸಿ ಕೊಟ್ಟುದಕ್ಕೆ ಶ್ರೀ ಪಂಚಾಕ್ಷರಿ ಹಿರೇಮಠರಿಗೆ ನಾವು ಅತ್ಯಂತ ಋಣಿಗಳಾಗಿದ್ದೇವೆ.

ಈ ಪುಸ್ತಕದ ಪ್ರಕಟನೆಯ ಕಾರ್ಯದಲ್ಲಿ ಸರ್ವ ರೀತಿಯಿಂದ ಸಹಕರಿಸಿದ ಶ್ರೀ ಬಸವರಾಜ ಹೊರಡಿಯವರಿಗೂ ನಮ್ಮ ಕೃತಜ್ಞತೆಗಳು.

ಧಾರವಾಡ
೨೦-೧-೧೯೬೫

– ಪ್ರಕಾಶಕರು

# ನಿವೇದನೆ

ಕವೀಂದ್ರ ರವೀಂದ್ರರಂಥ ಮಹಾ ಸಿಲನಿನ ಎದುರಿನಲ್ಲಿ ತಾನು ಬಹು ಅಲ್ಪ ಎನ್ನುವ ಪರಿಜ್ಞಾನ ಈ ಲೇಖಕನಿಗಿದೆ. ಅದುವೇ ಈ ಲೇಖಕನ ಜ್ಞಾನವೂ ಹೌದು. ರವೀಂದ್ರರ ಕಾವ್ಯವನ್ನು ಈ ಲೇಖಕ ಭಕ್ತಿಯಿಂದ, ಶ್ರದ್ಧೆಯಿಂದ ಅಭ್ಯಸಿಸಿದ್ದಾನೆ ಎನ್ನುವ ಸತ್ಯವೊಂದನ್ನು ಬಿಟ್ಟರೆ ಈ ಗ್ರಂಥದಲ್ಲಿ ಇನ್ನೇನೂ ಇಲ್ಲ. ವಿಶ್ವಕವಿಯ ಕಾವ್ಯವನ್ನು ಕುರಿತು ಇಲ್ಲಿ ಹೇಳಿರುವದೆಲ್ಲ ಸರಿ ಎನ್ನುವ ಅಥವಾ ಇಷ್ಟನ್ನೇ ಬರೆಯುಬಹುದೆನ್ನುವ ಅಹಂಕಾರ ಅಷ್ಟೇ ಅಲ್ಲ ಸಾತ್ವಿಕ ಅಹಂಕಾರವೂ ಈ ಲೇಖಕನಿಗೆ ಇಲ್ಲ. ಆ ಪೂರ್ಣತ್ವವನ್ನು ಈ ಅಪೂರ್ಣತ್ವ ಅರಿಯಲು ಪಟ್ಟ ಪ್ರಯತ್ನದ ಅಲ್ಪ ಫಲ ಇದು- ಈ ಕೃತಿ.

* * *

ರವೀಂದ್ರರ ಮಾತು ಮುತ್ತು; ಮುಕ್ತಿಯ ಧವಳಕಾಂತಿ. ರವೀಂದ್ರರ ಕಾವ್ಯವೆಂದರೆ ಎಳೆಯ ಮಾಣಿಕದಂತೆ ಹೊಳೆ ಹೊಳೆವ ಜ್ಞಾನಜ್ಯೋತಿ. ಅವರ ಸಾಹಿತ್ಯ ಬುದ್ಧಿ ಪ್ರಧಾನವಾದುದಲ್ಲ, ಭಾವನಾ ಪ್ರಧಾನವಾದುದು. ರವೀಂದ್ರರ ಕಾವ್ಯ ಅವರ ಮಹಾ ತಪಸ್ಸಿನ, ಒಳಿತಾದ ಬದುಕಿನ, ಪರಿಶುದ್ಧ ಚಿತ್ತದ ಮಹಾಪ್ರಸಾದ.

ರವೀಂದ್ರರ ಭಾಷಾಶಕ್ತಿ, ಸೊಗಸು, ಸಂಗೀತ ಮಾಧುರ್ಯ ಇಲ್ಲಿಯ ನನ್ನ ಅನುವಾದಗಳಲ್ಲಿ ಅಷ್ಟೇ ಪ್ರಮಾಣದಲ್ಲಿ ಬಂದಿವೆಯೆಂದಾಗಲಿ, ಬರುವುದು ಸಾಧ್ಯವೆಂದಾಗಲಿ ಹೇಳುವ ಸಾಹಸ ನಾನೆಂದೂ ಮಾಡಲಾರೆ.

ಈ ಕೃತಿ-ರವೀಂದ್ರರ ಸಮಗ್ರ ಕೃತಿಗಳ ಕೃತಿ ವಿಮರ್ಶೆಯಾಗಲಿ ಅಥವಾ ಅವರ ಸಾಹಿತ್ಯ ರಚನೆಯ ಇತಿಹಾಸವಾಗಲಿ ಅಲ್ಲ. ಇದರ ಓದಿನಿಂದ ನನ್ನ ಓದುಗ ರವೀಂದ್ರರ ಕೃತಿಗಳ ಪರಿಚಯ ಹಾಗೂ ರಸಾನುಭೂತಿ ಪಡೆಯಬೇಕು- ಇದು ಈ ಕೃತಿಯ ಉದ್ದೇಶ. ಅಷ್ಟಾದರೆ ಸಾಕು. ಈ ಲೇಖಕನ ಪರಿಶ್ರಮ ಸಾರ್ಥಕವಾದಂತೆ.

* * *

ಎನ್ನ ಅಂತರಂಗ, ಎನ್ನ ಬಹಿರಂಗ, ಎನ್ನ ಅರಿವು, ಎನ್ನ ಮರಹು, ಎನ್ನ ಸರ್ವಾಂಗದಲ್ಲೂ ಭರಿತನಾಗಿರುವ ಎನ್ನ ಗುರು, ಎನ್ನ ಲಿಂಗ,

ಎನ್ನ ಜಂಗಮ, ಎನ್ನ ಪರಮಾರಾಧ್ಯರಾದ ಪರಮಪೂಜ್ಯ ಶ್ರೀ ಮೃತ್ಯುಂಜಯ ಶಿವಯೋಗಿಗಳ ಮಹಾಪಾದದಲ್ಲಿ ಈ ಕಾಯಕದ ಎಡೆ ಅರ್ಪಿತವಾಗಿದೆ. ಅದು ನನ್ನ ಪುಣ್ಯ.

* * *

ಆತ್ಮೀಯ ಹಿರಿಯರೂ ನಾಡಿನ ಪ್ರತಿಭಾನ್ವಿತ ಹಿರಿಯ ಕವಿಗಳೂ ಆದ ಡಾ. ಡಿ. ಎಸ್. ಕರ್ಕಿ ಅವರು ಮುನ್ನುಡಿ ಬರೆದಿದ್ದಾರೆ. ನನ್ನ ಬಗೆಗೆ ಅವರು ತೋರುತ್ತ ಬಂದಿರುವ ಅಭಿಮಾನ, ವಾತ್ಸಲ್ಯ ಅಪಾರ.

ಹೃದಯ ಸಿರಿವಂತಿಕೆಯುಳ್ಳ ಸೋದರ ಶ್ರೀ ಸದಾಶಿವಣ್ಣ ಒಡೆಯರ ಅವರು ಈ ಗ್ರಂಥಕ್ಕೆ ಮೆಚ್ಚಿಕೆ ಬರೆದಿದ್ದಾರೆ.

ನನ್ನ ಸಾಹಿತ್ಯ ಸೃಜನಕಾರ್ಯದಲ್ಲಿ ಸದಾ ಶಕ್ತಿಯನ್ನು ನೀಡುತ್ತ ಬಂದಿರುವ ಹಾಲು ಹೃದಯದ ಸ್ನೇಹ ಜೀವಿಗಳ ಸ್ಮರಣೆ ನನ್ನಪಾಲಿನ ಭಾಗ್ಯ. ಅದರಲ್ಲೂ ನನ್ನ 'ದೇವು'ನನ್ನು ವಿಶೇಷ ಸ್ಮರಿಸುತ್ತೇನೆ. ಆ ಮಧುರ ಸ್ಮರಣೆ ಎದೆಯಲ್ಲಿರಬೇಕು. ಅಷ್ಟೆ. ಅದನ್ನು ಕುರಿತು ಮಾತನಾಡಿದರೆ ಅದಕ್ಕೆ ಅದೇ ಕೊರತೆ. ಹಾಗೆಂತಲೇ ಅವರ ಹೆಸರನ್ನು ಮೌನವಾಗಿಯೇ ಸ್ಮರಿಸುತ್ತೇನೆ.

ಈ ಕೃತಿಯನ್ನು ಪ್ರಕಟಿಸಿದವರು ಲಲಿತ ಸಾಹಿತ್ಯಮಾಲೆಯ ಗೆಳೆಯರು. ಈ ಸಂಸ್ಥೆಯನ್ನು ಕಟ್ಟಿ ಬೆಳೆಸಿದ ಆ ಪುಣ್ಯ ವ್ಯಕ್ತಿ ದತ್ತಣ್ಣ ಈ ಕೃತಿ ಹೊರಬರುತ್ತಿರುವ ಈ ಕಾಲದಲ್ಲಿಲ್ಲ. ಯಾರು ಕಂಡಿದ್ದರು ದತ್ತಣ್ಣ ನಮ್ಮ ಮಧ್ಯದಿಂದ ಇಷ್ಟು ತೀವ್ರ ಯಾರಿಗೂ ಏನನ್ನೂ ಹೇಳದಲೇ ಬರೆಯುತ್ತ ಕುಳಿತ ಕಥೆಯನು ಅರ್ಧಕ್ಕೆನೇ (ತನ್ನ ಬದುಕಿನ ಕಥೆಯನೂ) ನಿಲ್ಲಿಸಿ ಹೊರಟು ಹೋಗುತ್ತಾನೆಂದು. ಹೌದು ಯಾರಿಗೆ ಗೊತ್ತಿತ್ತು? ನಮ್ಮದು ಯಾರಿಗೆ ಗೊತ್ತಿದೆ? ಯಾರಿಗೆ ಯಾರದೂ ಗೊತ್ತಿಲ್ಲದಿರುವಲ್ಲಿ ಅಷ್ಟೇ ಅಲ್ಲ ನಮಗೆ ನಮ್ಮದು ಗೊತ್ತಿಲ್ಲದಿರುವಲ್ಲಿಯೇ ಸಾವಿನ ರಹಸ್ಯವಡಗಿದೆ. ದತ್ತಣ್ಣನ ಕೊರತೆ ಅದು ತುಂಬಿಬಾರದ ಕೊರತೆ. ಆ ಮನೆತನದ ಶ್ರೇಯೋಭಿವೃದ್ಧಿ ಬಯಸುವುದೊಂದೇ ಆತನ ಸ್ನೇಹಿತರು ಆತನಿಗೆ ಸಲ್ಲಿಸಬೇಕಾದ ಶ್ರದ್ಧಾಂಜಲಿ.

ಇಂದು ಈ ಸಂಸ್ಥೆಯನ್ನು ದತ್ತಣ್ಣನ ಸೋದರ ಶ್ರೀ ಶ್ರೀ. ಬಾ. ಕುಲಕರ್ಣಿ ಅವರು ನಡೆಸಿಕೊಂಡು ಹೋಗುತ್ತಿದ್ದಾರೆ. ಅವರೇ ಈ ಗ್ರಂಥವನ್ನು

ಪ್ರಕಟಿಸಿದ್ದಾರೆ. ಈ ಉದ್ಯಮ ಚೆನ್ನಾಗಿ ನಡೆದು ದತ್ತಣ್ಣ ಕಟ್ಟಿದ ಈ ಸಂಸ್ಥೆ ಅಭಿವೃದ್ಧಿ ಹೊಂದಲೆಂದು ಆಶಿಸುತ್ತೇನೆ.

ಈ ಗ್ರಂಥ ಇಷ್ಟು ಚಲುವಾಗಿ ಬರಲು ಕಾರಣರಾದವರು ಲಲಿತ ಮುದ್ರಣಾಲಯದ ಒಡೆಯರಾದ ಗೆಳೆಯ ಶ್ರೀ ಬಸವರಾಜ ಹೊರಡಿ ಅವರು.

ಇಲ್ಲಿಯ ಕೆಲವು ಗೀತಗಳನ್ನು ರವೀಂದ್ರ ಶತಮಾನೋತ್ಸವ ಕಾಲ ದಲ್ಲಿ ಆಕಾಶವಾಣಿ ಪ್ರಸಾರ ಮಾಡಿತು. 'ಪ್ರಬುದ್ಧ ಕರ್ನಾಟಕ'ದ ರವೀಂದ್ರ ವಿಶೇಷಾಂಕದಲ್ಲಿ ಕೆಲವು ಪ್ರಕಟವಾದವು. ಸಾಹಿತಿ ಮಿತ್ರರಾದ ಡಾ. ಹೆಚ್. ತಿಪ್ಪೇರುದ್ರಸ್ವಾಮಿಯವರು ಸಂಪಾದಿಸಿದ ಅರ್ಪಣಗ್ರಂಥ 'ಪ್ರಸಾದ'ದಲ್ಲಿ ಕೆಲವು ಪ್ರಕಟಗೊಂಡವು. ಇವರೆಲ್ಲರ ಉಪಕಾರ ಸ್ಮರಿಸುತ್ತೇನೆ.

ನನ್ನ ಕೃತಿಗಳ ಬಗೆಗೆ ಎಂದಿನಿಂದಲೂ ಅಭಿಮಾನ, ವಿಶ್ವಾಸ, ನಂಬುಗೆ ತೋರುತ್ತ ಬಂದಿರುವ ನನ್ನ ಓದುಗ ಬಳಗಕ್ಕಂತೂ ನಾನು ಎಂದೂ ಋಣಿ ಯಾಗಿದ್ದೇನೆ. ನನ್ನ ಇನ್ನುಳಿದ ಕೃತಿಗಳ ಬಗೆಗೆ ತೋರಿದ ಆದರವನ್ನು ಈ ಕೃತಿಯ ಬಗ್ಗೆಯೂ ತೋರಬಹುದೆಂದು ಆಶಿಸಿದ್ದೇನೆ.

ಶ್ರೀ ಮೃತ್ಯುಂಜಯ ವರುಷ ೭೮
ಕರ್ನಾಟಕ ವಿಶ್ವವಿದ್ಯಾನಿಲಯ
ಧಾರವಾಡ
ದಿ. ೧೩-೧-೧೯೬೫

—ಪಂಚಾಕ್ಷರಿ ಹಿರೇಮಠ

## ಈ ಪರಿಯ ಸೊಬಗು ...

# ಕವೀಂದ್ರ ರವೀಂದ್ರರು



ಓ ! ಶಿಲ್ಪಸುಂದರಿ;
ಅದೆಷ್ಟು ಶತ–ಸಹಸ್ರ ವರುಷಗಳಿಂದ
ನೀನು ದಿವಾ–ರಾತ್ರಿ ಇದೇ ರೀತಿ ಚಿರಏಕಾಕಿನಿ,
ಅನಾಸಕ್ತ, ಅನಶ್ವರ, ಸೌಂದರ್ಯ ಸುಷಮಾವತಿ
ತಪಸ್ವಿನಿಯ ತೆರದಿ ನಿಶ್ಚಲಳಾಗಿ
ನಿಂತಿದ್ದಿಯೇ !

ಆತ....

ಪ್ರಶಾಂತ ಚೆಲುಮೊಗದ, ಹೊಳಪುಳ್ಳ ಕಣ್ಣುಗಳ, ಬೆಳ್ಳಿಗಡ್ಡದ, ನಿಲುವಂಗಿಯ, ಹಿಮಾಲಯದ ನಿಲುವುಳ್ಳ ಆತ-ಒಟ್ಟಿನಲ್ಲಿ ರಸಋಷಿ. ಒಮ್ಮೆ ಕಣ್ತೆರೆದು ನೋಡಿದನೋ ಭುವನ ಪಾವನ ! ಮಗುದೊಮ್ಮೆ ತೆರೆದನೋ ಕಾವ್ಯಲೋಕದ ರಸಸೃಷ್ಟಿ ! ಆತ ಕವಿ, ದಾರ್ಶನಿಕ, ಕಲಾವಿದ, ಶಿಕ್ಷಣತಜ್ಞ ನಟ ಇನ್ನೂ ಏನೆಲ್ಲವೂ ಆದ ಆತ-ಎಲ್ಲಕ್ಕೂ ಹೆಚ್ಚಾಗಿ ಪ್ರೇಮಯೋಗಿ. ಆತ-ಭಾರತ ಭೂಮಿಯನ್ನು, ಈ ಮಣ್ಣಿನಲ್ಲಿಯ ಸುಗಂಧವನ್ನು ಪ್ರೀತಿಸಿದ. ಈ ಮಣ್ಣಿನ ಪ್ರೀತಿಯ ಮೂಲಕ ವಿಶ್ವವನ್ನೇ ಪ್ರೀತಿಸಿದ. ಭಾರತೀಯ ಸಂಗೀತ ಲೋಕಕ್ಕೆ ಹೊಸ ಸಂಗೀತ ಪದ್ಧತಿಯನ್ನು ನೀಡಿದ ಆತ-ಸ್ವರ ಸಾಮ್ರಾಟ ! ಲೋಕವೇ ಅಚ್ಚರಿಗೊಳ್ಳುವಂತಹ, ಮುಗ್ಧವಾಗುವಂತಹ ಅಸಂಖ್ಯಾತ ಕಾವ್ಯ ಕೃತಿಗಳನ್ನು ನೀಡಿದ ಆತ-ವಿಶ್ವಕವಿ; ವಿಶ್ವದೃಷ್ಟಾರ! ವಿಶ್ವ ಎಂದೂ ಕಂಡರಿಯದಂತಹ ಶಾಂತಿ-ನಿಕೇತನ, ಶ್ರೀ-ನಿಕೇತನ, ವಿಶ್ವಭಾರತಿಯಂತಹ ಲೋಕೋತ್ತರ ಸಂಸ್ಥೆಗಳ ಕಟ್ಟಿ ತನ್ನ ಮಹಾಕಲ್ಪನೆಗಳಿಗೆ ಸಾಕಾರ ರೂಪ ನೀಡಿದ ಆತ-ಪ್ರತಿ ಬೊಮ್ಮ ! ಆತ ಹಿಂದೆ ಇದ್ದ, ಈಗಲೂ ಇದ್ದಾನೆ, ಮುಂದೆಯೂ ಇರುತ್ತಾನೆ. ಆತನೇ ವಿಶ್ವಬಂಧುತ್ವ, ವಿಶ್ವಪ್ರೇಮವನ್ನು ಈ ಜಗತ್ತಿಗೆ ಕಲಿಸಿದಾತ.

ಆತ-ರವೀಂದ್ರನಾಥ ಠಾಕೂರ.

* * *

ವಿಶ್ವಕವಿ. ಹೌದು ರವೀಂದ್ರನಾಥ ವಿಶ್ವಕವಿ....

* ...In the course of my travel all over the world, I found that the name of Tagore was the living symbol of India in every corner.

I was passing one day through a hospital in Budapest-a Surgical Boarding it was, I think. Great many beds were lying there. People knew

* Mrs. Sarojini Naidu---"Tagore Centenary Souvenir" P. 116, 117.

that I was coming and under every pillow a hand was put and a book was brought out and everybody said Tagore, Tagore and Tagore. The book was a new translation in Hungarian of one of Tagore's Plays.

One year I spent the winter in Scandinavia. You know that it is from Sweden that the Nobel Prize came to Tagore. So naturally Sweden was full of Tagore and the Swedish lady, who translated *Gitanjali* before England had heard of Tagore, was one of my hostesses. And, of course, everybody wanted to know about Tagore in Sweden. It was only when I passed on to Norway on the Norwegian mountain slopes where there were scattered farm-houses and where farm-houses were snow-bound during winter and where in those little solitary houses cattle were tending and for nearly six months there was nothing but darkness-it was there that I found farmers in families-peasants, living by Provision for aeons throughout the winter in the collected works of Rabindranath.

Passing through France, Germany and Italy I found that there was Tagore everywhere. In America and Canada they wanted to know about Tagore, in East Africa where Savage tribes lived they knew that there was a man–a great god they

thought he was-called Tagore. He had reached the hearts of the Primitive. There was no country in the world where they had not heard of Tagore.

* * *

ವಿಶ್ವಕವಿ ರವೀಂದ್ರರು ಭಾರತದ ತಪೋವನದ ಪದ ಚಿನ್ಹಗಳಲ್ಲಿ ವಿಶ್ವ ಕಲ್ಯಾಣದ ಶುಭಮಾರ್ಗ ಕಂಡುಹಿಡಿದರು. ಈ ಪಾವನ ವಾತಾವರಣದಲ್ಲಿ ಹೊಸಯುಗ, ಹೊಸ ವಿಶ್ವದ ರಚನೆ–ಅವರ ಜೀವನದ ಪರಮ ಉದ್ದೇಶ ವಾಗಿತ್ತು. ಪ್ರಕೃತಿಯ ಪವಿತ್ರ ಸಾನ್ನಿಧ್ಯದಲ್ಲಿ ಜೀವನದ ಸಾಧನೆ ನಡೆಯ ಬೇಕೆಂಬುದು ಅವರ ಸದಿಚ್ಛೆ. ಪ್ರಕೃತಿಗೆ ಜೀವನದಲ್ಲಿ ರಸಾತ್ಮಕ ಅಭಿವ್ಯಕ್ತಿ ಕೊಡಲೋಸುಗವೇ ರವೀಂದ್ರರು ಶಾಂತಿ–ನಿಕೇತನದಲ್ಲಿ ಋತು–ಉತ್ಸವ ಪ್ರಾರಂಭಿಸಿದರು. ಈ ಉತ್ಸವದಲ್ಲಿ ಗೀತ, ನಾಟ್ಯ, ನೃತ್ಯ, ಸಂಗೀತ, ವಾದ್ಯಸಂಗೀತ, ಎಲ್ಲ ಲಲಿತ ಕಲೆಗಳ ಸಂಸ್ಫುರಣತೆ ಅಲ್ಲಿರುತ್ತಿತ್ತು–ಈ ಎಲ್ಲ ಕಲೆಗಳು ಪ್ರಕೃತಿಯಿಂದಲೇ ಋತುಗಳ ರೂಪದಲ್ಲಿ ಮೈವೆತ್ತಿ ಬಂದಹಾಗೆ....

ರವೀಂದ್ರರ ವಿಶ್ವ–ಭಾರತಿ, ವಿಶ್ವಕುಟುಂಬದ, ವಿಶ್ವಬಾಂಧವ್ಯದ ಪರಮ ಪ್ರತೀಕ ! ವಿಶ್ವಬಂಧುತ್ವ ವಿಶ್ವಪ್ರೇಮವೇ ಕವಿಯ ಸಾಧನೆಯಾಗಿತ್ತು, ಸಿದ್ಧಿಯಾಗಿತ್ತು. ಕ್ಷಿತಿಜದ ಕೆಳಗಿರುವ ಎಲ್ಲ ದೇಶವನ್ನು ಸುತ್ತಿದರು, ಎಲ್ಲ ಜನರನ್ನು ಕಂಡರು. ಅವರ ವ್ಯಕ್ತಿತ್ವ ಅವರ ಮಾತಿನಲ್ಲಿಯ, ಚಿತ್ರದಲ್ಲಿಯ ಬೆಳಕನ್ನು, ಅವರ ಕಾವ್ಯದಲ್ಲಿಯ ವಿಶ್ವ ಸಂದೇಶವನ್ನು ಕಂಡು ಅನುಭವಿಸಿದ್ದ ವಿಶ್ವದ ಜನ, ಜೀವನವೇ ಸಾರ್ಥಕ್ಯಗೊಂಡಿತೆಂದು ಸಮಾಧಾನದ ಉಸುರ್ಗರೆ ಯಿತು. ಆಗಲೇ ನಮ್ಮ ಸಮಕಾಲೀನ ಜನಾಂಗದ ಇನ್ನೊಬ್ಬ ಆಯಿರಿಶ್ ಮಹಾಕವಿ ವಿಲಿಯಂ ಬಟ್ಲರ ಯಿಟ್ಸ್ "ದುಃಖಾಕ್ರಾಂತ ಹೃದಯ ಮತ್ತು ಜೀವಾತ್ಮ ಅನಾದಿ ಕಾಲದಿಂದ ನಿರೀಕ್ಷೆಯಲ್ಲಿದ್ದ ದಿವ್ಯ ಸಂದೇಶ 'ಗೀತಾಂಜಲಿ' ಯಿಂದ ಪಡೆದು ಇಂದು ಆನಂದ ಸಾಗರದಲ್ಲಿ ಮುಳುಗಿದೆ" ಎಂದು ಅಪಾರ ವಾಗಿ ಕೊಂಡಾಡಿದ. ರವೀಂದ್ರರನ್ನು ಕೊಂಡಾಡಿದುದು ಒಬ್ಬ ಆಯಿರಿಶ್ ಕವಿಯೇ, ಲೋಕದ ಎಲ್ಲ ಹಿರಿಯರು, ಅತಿರಥಿ ಮಹಾರಥಿಗಳು ಕೊಂಡಾಡಿ ದರು. ಆದರೆ ರವೀಂದ್ರರಿಗೆ ಗೊತ್ತಿತ್ತು ತಮಗಿಂತಲೂ ಮಹಾಕವಿ–ಇನ್ನೊ ಬ್ಬನಿದ್ದಾನೆ ಎಂಬುದು. ಆಗಲೇ ಅವರು ಹಾಡಿದರು :

* My poet's vanity dies in shame before Thy sight, O Master poet, I have sat down at Thy feet. Only let me make my life simple and straight, like a flute of reed for Thee to fill with music.

ಲೋಕ ಆತನ ಕೃತಿಗಳ ಬಗೆಗೆ ಹುಚ್ಚೆದ್ದು ಆತನನ್ನು ಹೊಗಳಿದಾಗ ಆ ಮಹಾಮಾನವ ಹಾಡಿದ ರೀತಿ ಇದು. ಆತ ಸ್ಥಿತ ಪ್ರಜ್ಞ ! ಆತ ರಸ ಋಷಿ !

ಈ ರಸ–ಋಷಿ ಉದಾರಚರಿತವಾದ ಭಾರತದ ವಿರಾಟ ವ್ಯಕ್ತಿತ್ವವನ್ನು ಸಾಗರ ತೀರದಲ್ಲಿ ಕಂಡಿದ್ದರು :

"ಹೇ ಮೋರ ಚಿತ್ತ, ಪುಣ್ಯತೀರ್ಥ ಜಾಗೋರೇ ಧೀರೆ
ಏಯಿ ಭಾರತೇರ ಮಹಾಮಾನವೇರ ಸಾಗರ ತೀರೆ !"

*        *        *

ರವೀಂದ್ರರ ಕಾವ್ಯದಲ್ಲಿ ರೂಪುಗೊಂಡಿರುವ ವಸ್ತು ಅಂತಃಪುರುಷನ ಬಗೆಗೆ ಊರ್ಧ್ವಮುಖಿ ಆವೇಗ ಹಾಗೂ ಆಕಾಂಕ್ಷೆಯ ಪ್ರತೀಕವೆಂದು ನಾನು ಭಾವಿಸಿದ್ದೇನೆ. ಅದಕ್ಕೆ ಭಗವಂತನನ್ನು ಕುರಿತು ಚಿಂತನಾಶೀಲನಾಗಿರುವುದೆಂದೂ ಹೇಳಬಹುದು. ಅವರ ಚೇತನೆಯ ಗುಣವೈಶಿಷ್ಟ್ಯತೆಯಂದರೆ ಅದು ಒಂದೇ ಕಾಲದಲ್ಲಿ ಆಧುನಿಕವೂ, ಪ್ರಾಚೀನವೂ ಆಗಿರುವುದು. ಅಷ್ಟೇ ಅಲ್ಲದೆ ಆ ಅಮೋಘ ಹೊಂದಾಣಿಕೆಯನ್ನು ಸದಾಕಾಲ ಅಪರಿಚ್ಛಿನ್ನ ಹಾಗೂ ಅನಿರ್ವಚನೀಯವಾಗಿರಿಸಿರುವುದನ್ನು ನಾವು ಮನಗಂಡಾಗ ಮಂತ್ರಮುಗ್ಧರಾಗುತ್ತೇವೆ. ಈ ಅಸಾಧ್ಯವಾದ ಸಾಧ್ಯತೆ ನಮ್ಮ ಕಾಲದ ಪ್ರವಾದಿಯಾದ ರವೀಂದ್ರರಂತಹ ಋಷಿಕವಿಗೆ ಮಾತ್ರ ಸಾಧ್ಯವಾದುದು ಈ ಶತಮಾನದ ಮಹಾಭಾಗ್ಯವೆಂದೇ ಹೇಳಬೇಕು.

ರವೀಂದ್ರನಾಥರದು ಕಾವ್ಯದಲ್ಲಿ 'ಸತಿ–ಪತಿ' ಭಕ್ತಿಮಾರ್ಗ. ಅವರು ತಮ್ಮ ಆರಾಧ್ಯ ದೇವನನ್ನು ಪತಿಯ, ಒಡೆಯನ ರೂಪದಲ್ಲಿ ಗ್ರಹಿಸಿ ತಾವು

---

*. Tagore centenary souvenir P. 119

ಸತಿಯಾಗಿ ತಮ್ಮ ಮನದಳಲನ್ನು ತಮ್ಮ ಅಸಂಖ್ಯಾತ ಕಾವ್ಯದಲ್ಲಿ ತೋಡಿ ಕೊಂಡಿರುವುದನ್ನು ಕಾಣುತ್ತೇವೆ. ಅವರು ತಮ್ಮ ಆರಾಧ್ಯ ಮೂರ್ತಿಯನ್ನು ಈ ಚರ್ಮಚಕ್ಷುಗಳಿಂದ ನೋಡಲಿಲ್ಲ. ನಿರ್ನಿಮೇಷ ದೃಷ್ಟಿಯಿಂದ ಆತ ನನ್ನು ಪ್ರತ್ಯಕ್ಷಗೊಳಿಸಿಕೊಂಡಿಲ್ಲ. ಆ ಇಚ್ಛೆಯೂ ಅವರಿಗಿರಲಿಲ್ಲ. ಆತನನ್ನು ದೂರ, ಮರೆಯುಲ್ಲಿರಿಸಿಕೊಂಡೇ ಅವರು ತಮ್ಮ ಅನಂತ ಭಾವನೆಗಳ, ಅನಂತ ಭಂಗಿಮೆಗಳ, ನಾಮ-ರೂಪ, ಕಲ್ಪನೆಗಳ, ಇಚ್ಛೆಗಳಲ್ಲಿ ಆತನನ್ನು ರಹಸ್ಯ ವಾಗಿರಿಸುವಲ್ಲಿಯೇ ಹೆಚ್ಚಿನ ಆನಂದ ಹಾಗೂ ಸಾರ್ಥಕತೆಯಿದೆಯೆಂದು ಭಾವಿಸಿದ್ದರು. ಆತ, ಆ ಸ್ವಾಮಿ ಅನಂತ, ಅಸೀಮನಾಗಿದ್ದಾನೆ. ಆದ್ದರಿಂದ ಆತ ಗುರುತು ಇಲ್ಲದವನಾಗಿದ್ದಾನೆ. ಹತ್ತಿರ ಎಂದರೆ ದೂರ, ದೂರ ಎಂದರೆ ಹತ್ತಿರ ಇರುವಾತ ಆತ. ಈ ಕಾರಣದಿಂದಲೇ ಭಗವಂತ ನಮಗೆ ಪರಿಚಿತ ನೆಂದರೂ ಅಪರಿಚಿತ, ವಿದೇಶಿ, ಕೌತುಕಮಯ, ಆಟಗಾರನಾಗಿ ಕಾಣು ತ್ತಾನೆ-ಎಂದು ರವೀಂದ್ರರ ಭಾವನೆ.

ಆ ಪರಮ ಪುರುಷ ಪ್ರೇಮಮಯಿ. ನಮ್ಮಲ್ಲಿರುವ ನಿರಂತರವಾದ ವಿಯೋಗ, ವಿರಹ, ಆ ಪ್ರೀತಿಯನ್ನು ಇನ್ನೂ ಗಾಢ, ತೀವ್ರ, ಮಧುರ, ಉದ್ವೇಲಿತಗೊಳಿಸುತ್ತದೆ-ಎನ್ನುವದು ಚಿರಸತ್ಯ. ಆ ವಿರಹವೇ ಪ್ರೇಯಸಿಯ ಬದುಕನ್ನು ಇನ್ನೂ ಪೂರ್ಣ ಗೊಳಿಸುತ್ತದೆ, ಪರಿಪಕ್ವಗೊಳಿಸುತ್ತದೆ, ಮೃದು ವಾಗಿಸುತ್ತದೆ. ಇಂತಹ ಪೂರ್ಣತೆ, ಇಂತಹ ಮೃದುತ್ವವನ್ನು ರವೀಂದ್ರರು ಭಗವಂತನ ವಿರಹದಲ್ಲಿ ಪಡೆದರು. ಒಂದು ಮಹಾ ಸೋಜಿಗವೆಂದರೆ ಅದು- ರವೀಂದ್ರರ ಈ ವಿರಹದಲ್ಲಿ, ಈ ವಿಚ್ಛೇದದಲ್ಲಿ ಮಿಲನದ ರಹಸ್ಯ ಹುದುಗಿ ಕೊಂಡಿರುವುದು. ಈ ಸತ್ಯವನ್ನು ಓದುಗ ಕಾಣುವುದಾದರೆ ರವೀಂದ್ರರ ಗೀತಗಳಲ್ಲಿಯ ರಹಸ್ಯವನ್ನು ಕಂಡುಕೊಳ್ಳಲು ಶಕ್ಯನಾದ ಹಾಗೆ. ಮಿಲನ ಕ್ಕಿಂತಲೂ ವಿಯೋಗಕ್ಕಿರುವ ಮೌಲ್ಯ ಅಪಾರ.

ವಿಯೋಗದಲ್ಲಿ ನಮ್ಮ ಎಲ್ಲ ರಾಗಾತ್ಮಕ ವೃತ್ತಿಗಳು ಜಾಗೃತಗೊಳ್ಳು ತ್ತವೆ. ನಮ್ಮ ಆಂತರಿಕ ಜೀವನದಲ್ಲಿ ಒಂದು ರೀತಿಯ ವಿಪ್ಲವ, ಕೋಲಾ ಹಲ ಏಳುತ್ತದೆ. ನಮಗೆ ಸುತ್ತಲೂ ಪ್ರೇಮವೇ ಪ್ರೇಮದೃಷ್ಟಿಗೋಚರ ವಾಗುತ್ತದೆ. ಮಿಲನದ ಉತ್ಸುಕತೆ ನಮ್ಮ ವೃತ್ತಿಗಳನ್ನು ಅನುರಾಗದಲ್ಲಿ ಮೀಯಿಸುತ್ತದೆ. ಆಗ ನಾವು ನೋಡುವುದೆಲ್ಲವೂ ಪ್ರೇಮಮಯವಾಗಿ

ಕಾಣುತ್ತದೆ. ನಾವು ಏನೇ ಕೇಳಿದರೂ ಅದು ಪ್ರೇಮ ಸಂದೇಶವಾಗಿಯೆ ತೋರುತ್ತದೆ. ಏನೇ ನೋಡಿದರೂ ಅದು ಪ್ರೇಮಿಯ ಪ್ರತಿರೂಪವಾಗಿ ತೋರಿ ನಮ್ಮ ಕಣ್ಣುಗಳನ್ನು ಚಂಚಲಗೊಳಿಸುತ್ತದೆ. ವಿಯೋಗದಲ್ಲಿ ನಮ್ಮ ಹೃದಯ ಒಂದು ರೀತಿಯ ಆಘಾತಕ್ಕೆ ಒಳಗಾಗುತ್ತದೆ. ಬಹು ಸೂಕ್ಷ್ಮವಾದ ಮನ ವಿರಹದಲ್ಲಿ ತಲ್ಲಣಿಸುತ್ತದೆ. ಆ ವೇದನೆ ನಮ್ಮ ಅಂತ ರ್ಜೀವನ ಪೂರ್ಣ ಅಭಿವ್ಯಕ್ತಿ ಮತ್ತು ಕಾವ್ಯದ ಯಥಾರ್ಥ ವಿಷಯವಾಗು ತ್ತದೆ. ಎಲ್ಲ ಮಹಾಕವಿಗಳಲ್ಲಿಯೂ ಈ ವಿರಹ, ಈ ವಿಯೋಗ ಇದ್ದೇ ಇದೆ. ಆದಿಕವಿ ಮಹರ್ಷಿ ವಾಲ್ಮೀಕಿಯ ಕಾವ್ಯ ಕಾಲದಿಂದ ಇಂದಿನ ಕಾವ್ಯ ಕಾಲದ ವರೆಗೂ–ವಾಲ್ಮೀಕಿ, ವ್ಯಾಸ, ಕಾಳಿದಾಸ, ಭವಭೂತಿ, ಜಯದೇವ, ಚಂಡಿ ದಾಸ, ಪಂಪ, ಚಾಮರಸ, ತುಳಸಿ, ಫಿರ್ದೂಷಿ, ಕಬೀರ, ಷಡಕ್ಷರದೇವ, ಹರಿಹರ, ಕುಮಾರವ್ಯಾಸ, ಡಾಂಟೆ, ಗಯಥೆ, ಶೆಲಿ, ಬಾಯರನ್, ಕೀಟ್ಸ್, ಇಖ್ಬಾಲ, ರವೀಂದ್ರರು–ಕೆಲವರು ಭಗವದ್ಭಕ್ತಿಯಲ್ಲಿ ಭಗವಂತನ ವಿರಹದಲ್ಲಿ ಕಾವ್ಯಾಭಿವ್ಯಕ್ತಿ ಪಡೆದಿದ್ದರೆ, ಇನ್ನು ಕೆಲವರು ತಮ್ಮ ತಮ್ಮ ಪ್ರೇಯಸಿಯರ ವಿರಹದಲ್ಲಿ ಪಡೆದಿದ್ದಾರೆ. 'ರತ್ನಾವಳಿ'ಯ ವಿರಹದಲ್ಲಿ ವ್ಯಾಕುಲಗೊಂಡ ತುಳಸಿದಾಸ ಅತ್ತೆಯ ಮನೆಗೆ ಓಡಿಹೋಗುತ್ತಾನೆ. ಅಲ್ಲಿ ಪಾರ್ಥಿವ ಪ್ರೇಯಸಿ ನಾರಿಯ ವಿಯೋಗ–ಅಪಾರ್ಥಿವ ಪ್ರೇಮಿ ರಾಮನ ವಿರಹದಲ್ಲಿ ಪರಿಣತ ಗೊಂಡು ಅವರ ಕಾವ್ಯದ ಕೇಂದ್ರವಾದುದನ್ನು ಅರಿತಿದ್ದೇವೆ. ಹಾಗೆಂತಲೆ- ವಿಯೋಗಕ್ಕಿರುವ ಮೌಲ್ಯ, ಮಿಲನದಲ್ಲಿ ಲಭ್ಯವಾಗವುದಿಲ್ಲ.

* * *

ರವೀಂದ್ರರ ಕಾವ್ಯದ ಚೇತನೆಯಲ್ಲಿ ಉಪನಿಷತ್ತಿನ ಸ್ವರ ಎಷ್ಟಿದೆಯೋ ಅಷ್ಟೇ ಪ್ರಮಾಣದಲ್ಲಿ ಪಾಶ್ಚಾತ್ಯ ಸ್ವರವೂ ಕೂಡಿಕೊಂಡಿದೆ. ರವೀಂದ್ರರ ಕಾವ್ಯಬದುಕಿನಲ್ಲಿ ಇವೆರಡು ಅಮೋಘ ಸಂಸ್ಕೃತಿಯ ಸಮಾವೇಶ, ಹೊಂದಾ ಣಿಕೆಯೇ ಒಂದು ಅಪರೂಪ ರಸಾಯನವಾಗಿ ಪರಿಣಮಿಸಿದೆ.

ಅವರ ಕಾವ್ಯದ ಇನ್ನೊಂದು ಹಿರಿಮೆಯೆಂದರೆ– ಕಾವ್ಯದಲ್ಲಿ ಸಂಗೀತ ಹಾಸು–ಹೊಕ್ಕಾಗಿರುವುದು. ಪ್ರಶಾಂತವಾದ ಸಾಗರದ ಮೇಲೆ ಸಂಗೀತ ಹುಟ್ಟಿಸುತ್ತ ತೇಲುವ ತರಂಗಿತ ತೆರೆಗಳ ಹಾಗೆ ಅವರ ಕಾವ್ಯ ಸಹಜ, ಸುಲ ಲಿತ, ಸ್ವಾಭಾವಿಕ, ನಾದಮಯ.

ರವೀಂದ್ರರು ಕಾವ್ಯಬ್ರಹ್ಮರಷ್ಟೇ ಅಲ್ಲ ಅವರು ನಾದಬ್ರಹ್ಮರೂ ಹೌದು. 'ನಿರ್ಝರೇರ ಸ್ವಪ್ನಭಂಗ'ದಿಂದ ಪ್ರಾರಂಭ ಮಾಡಿ 'ಹೃದಯ ಆಮಾರ ನಾಚರೇ ಆಜಿಕೆ' ಮತ್ತು 'ಯೇ ಆಸೆ ಯೇ ಅತಿ ಭೈರವ ಹರಷೇ' 'ಬಲಾಕಾ'ದ 'ಪಾರವಾರ ಶಬ್ದ ಉದ್ದಾಮ ಚಂಚಲ'ದ ವರೆಗೆ ಒಂದೇ ಶೃತಿ, ಒಂದೇ ನಾದ. ಒಂದೇ ಸ್ವರ-ಮಾಧುರ್ಯ ಅವಿಚ್ಛಿನ್ನವಾಗಿ ಸಾಗಿ ಬಂದಿರುವುದನ್ನು ಕಾಣುತ್ತೇವೆ. ಆ ನಾದಯೋಗಿಯ ಅಮೋಘವಾದ, ಮೋಹಕವಾದ ನಾದಮಾಧುರ್ಯಕ್ಕೆ ಮಂತ್ರಮುಗ್ಧರಾಗುತ್ತೇವೆ.

ರವೀಂದ್ರರದು ಸದಾ ಚೇತನಾಮಯ ಬದುಕು. ಸದಾ ನಡೆಯುತ್ತಿರುವುದೇ ಅವರ ಧ್ಯೇಯ. ಗುರಿಯೂ ಅದೆ. ಎಲ್ಲಿಯೂ ನಿಲ್ಲುವ ಹಾಗೆಯೇ ಇಲ್ಲ. ನಾಳೆಯನು ಹಿಂದಿರಿಸಿ ಹೋಗುವುದೇ ಅವರ ಹಿರಿಮೆ. ಒಂದು ದಿನ ಉತ್ತುಂಗಶೃಂಗವಾದುದು ಮತ್ತೊಂದು ದಿನ ಅವರ ಕಾಲ ಕೆಳಗೆ ಬಂದುದನ್ನು ಅವರ ಸುದೀರ್ಘವಾದ ಬದುಕಿನಲ್ಲಿ ನಾವು ಕಾಣುತ್ತೇವೆ. ಅವರ ಜೀವನ ಧಾರೆಗೆ ಎಲ್ಲಿಯೂ ತಡೆಯೆಂಬುದೆ ಇಲ್ಲ. ಸದಾ ಚಲಿಸುವುದು. ಅಂತೇ ಅವರು ಹಾಡಿದರು :

ಎಲ್ಲರಿಗೂ ಮನೆಮಾರುಗಳುಂಟು
ನನಗೋs ! ಕೇವಲ ಮಾರ್ಗವುಂಟು
ಚಲಿಸಲೆಂದು !

ಅವರು ನಿರಂತರ ಈ ನಡೆಯುವಿಕೆಯ ಕೊನೆಯಲ್ಲಿ ಏನಿದೆಯೆಂಬುದನ್ನು ಅರಿತಿದ್ದರು. ಅವರು ಅದನ್ನು ಸ್ಪಷ್ಟಗೊಳಿಸಿದ್ದಾರೆ ಕೂಡ :

ಎಲ್ಲಿ ವಿಪುಲ ವಿರತಿಯಿದೆಯೋ
ಅಲ್ಲಿ ಅಪಾರ ಶಾಂತಿಯಿದೆ,
ಅಲ್ಲಿ ಧೀರ ಗಂಭೀರ
ಗಭೀರ ಮೌನ ಮಹಿಮೆ ಇದೆ !

ರವೀಂದ್ರರ ಈ ಗತಿ, ಈ ನಡೆಯುವಿಕೆ ಏಕಾಂತ ಉದ್ದೇಶ್ಯವಲ್ಲ ಅದು ಜ್ಯೋತಿರ್ಮುಖಿ, ಜ್ಯೋತಿರ್ಮಯಿಯಾಗಿದೆ.

ಈ ಗತಿಗೆ ಮೂಲತಃ ಆಧ್ಯಾತ್ಮಕ ಹಾಗೂ ಭಗವತ್ಮುಖಿ ಅಭಿಪ್ಸಾ ಎಂದು ಕರೆಯಬಹುದಾಗಿದೆ. ಇಲ್ಲಿಯೇ ಸಕಲ ಸಂಪತ್ತಿದೆ. ಉಜ್ವಲ, ಮಧುರ ಪ್ರಗಾಢ, ಪ್ರಖರ ಹಾಗೂ ಶಾಲಿನಿ ಸ್ವಚ್ಛತ್ವ ಅಡಗಿದೆ.

ರವೀಂದ್ರರು ಹಾಡುಗಳ ಚಕ್ರವರ್ತಿ. ಕಾವ್ಯದ ಅಂತರ್ಯದಿಂದಲೇ ಕವಿಯ ಚಿತ್ತದ ಸಹಜಸ್ವರೂಪ ಅಭಿವ್ಯಕ್ತಗೊಂಡಿದೆ.

ಸುಂದರವಾದ ಭಾಷೆ, ಛಂದ, ಛವಿ–ಇವೆಲ್ಲದರ ಮನೋಹರವಾದ ಹೊಂದಾಣಿಕೆ, ಓದುಗನ ಮನ–ಪ್ರಾಣವನ್ನು ಮಧುರಗೊಳಿಸುತ್ತದೆ, ಪಾವನ ಗೊಳಿಸುತ್ತದೆ.

ರವೀಂದ್ರರ ಕಾವ್ಯ, ವಸ್ತು ನಿಷ್ಠವಾದುವೇ ಹೊರತು ಕ್ರಮಬದ್ಧವಾದ ಕಾವ್ಯರಚನೆಯೇ ಪರಮ ಉದ್ದೇಶವಲ್ಲ. ಅವರ ಕಾವ್ಯ ಅವರ ಆಂತರಿಕ ಬದುಕಿನ ತತ್ತ್ವಚೇತನೆಯ ಸಂಗ್ರಹಿತ, ಸಂಜೀವಿತವಾದ ರಸಮಯ ಸತ್ಯವಾಗಿದೆ. ಅಂತರ್ಯದಲ್ಲಿಯ ಮೂಲ ಪ್ರೇರಣೆ ಅಥವಾ ಚೇತನೆಯ ಧರ್ಮದ ಒತ್ತಡತೆ ಮತ್ತು ಅವಶ್ಯಕತೆಗನುಸಾರವಾದ ಅನುರೂಪತೆ ಹಾಗೂ ಋಜುತ್ವ ಅವರ ಕಾವ್ಯದ ಜೀವಾಳ. ಆ ನಿರಂತರವಾದ ಊರ್ಧ್ವಮುಖಿ ಬದುಕಿನ ಆವೇಗ, ತೃಷೆ, ಅಂತಃಪುರುಷನ ಅನಿರ್ವಚನೀಯವಾದ ಪರಮಪಾವನ ಜ್ಯೋತಿಯ ದರ್ಶನಾಪೇಕ್ಷೆ–ಇದುವೇ ಅವರ ಆಂತರಿಕ-ಅನಂತ, ಸೀಮಾತೀತ, ಅಬಾಧಿತ ಬಯಕೆ.

'ನಿರ್ಝರೇರ ಸ್ವಪ್ನ ಭಂಗ'ದಲ್ಲಿ :

ಶಿಖರ ಶಿಖರದಿಂದ
ಭೂಮನೆಯಿಂದ ಭೂಮನೆಗೆ ಮರಳಿ
ಕಿಲ ಕಿಲ ನಕ್ಕು
ಹಾಡ ಹಾಡುವೆ ಕಲ....ಕಲ....
ತಾಳ ತಾಳ ನೀಡಿ ಚಪ್ಪಾಳೆ !

ಇದೇ ಅಭೀಪ್ಸೆಯ ಪ್ರಥಮ ಜಾಗೃತಿ. ತರುಣ ಕಿಶೋರ ಚಪಲ, ಬಾಹ್ಯ ದೃಷ್ಟಿಪ್ರಧಾನ, ಸ್ಥೂಲ ಕರ್ಮವೃತಿಯಾಗಿ ಇಲ್ಲಿ ಕಾಣುತ್ತಾನೆ. ಇಲ್ಲಿ ತಾರುಣ್ಯದ ಉದ್ವೇಗದ ಉತ್ಸಾಹ ಮೂರ್ತಿಮತ್ತಾಗಿದೆ. ಮತ್ತೆ 'ಸೋನಾರ ತರೀ'ಯಲ್ಲಿ :

ಹಾಯಿಯ ಹುಟ್ಟು ಹಾಕುತ್ತ
ಅತ್ತ ಕಡೆಯಿಂದ ಬರುತಿರುವವನಾರು !
ನೋಡಿದಾಕ್ಷಣವೇ ಅನಿಸಿತು
ನಾನವನ ಬಲ್ಲೆ, ಪರಿಚಿತನವನು-ಎಂದು !

ಈ ಕಾವ್ಯದ ತುಂಬ ತುಂಬಿರುವ ಚೇತನೆ ಅಂತರ್ಮುಖಿಯಾಗಿರುವುದನ್ನು ಬಹು ಸುಲಭವಾಗಿ ಗುರುತಿಸಬಹುದಾಗಿದೆ.

ಯೌವ್ವನದ ಪ್ರಥಮ ವಿರಹದ ಸ್ವಾದ, ಪ್ರಾಣದಲ್ಲಿ ಮಧುರವಾದ, ತೀವ್ರವಾದ ಕಾರುಣ್ಯವನ್ನು ಹುಟ್ಟಿಸಿವೆ. ರವೀಂದ್ರರ ಲೋಕೋತ್ತರ ಕರುಣ ಚಿತ್ರವೆಂದರೆ "ಮಾತೃಹೀನಾ ಬಾಲಿಕಾಕಿ ದುರ್ಗಾಪೂಜಾ" ಎಂಬುದು.

ರವೀಂದ್ರರು ಯಾವುದರ ಅನ್ವೇಷಣೆಯಲ್ಲಿ ತೊಡಗಿದ್ದರೋ ಅದು ಅವಶ್ಯ ಅವರಿಗೆ ಲಭ್ಯವಾಗಿದೆಯೆಂಬ ಮಾತನ್ನು ಅವರ ಸಮಗ್ರ ಕಾವ್ಯಾವಲೋಕನದಿಂದ ಗ್ರಹಿಸಬಹುದು. ಈ ಅಭಿಪ್ಸೆಯ ಚರಮೋತ್ಕರ್ಷ ಅವರ ಪೂರ್ಣಸೃಷ್ಟಿಯೆಂದು ಹೇಳಬಹುದಾದ 'ಉರ್ವಶಿ'ಯಲ್ಲಿ ಕಾಣುತ್ತೇವೆ. ರವೀಂದ್ರರು ಈ ಕಾವ್ಯದಲ್ಲಿ ತಮ್ಮ ಸಮಸ್ತ ಚೇತನೆಯನ್ನೇ ತುಂಬಿದ್ದಾರೆ. ಇಲ್ಲಿಯ ಅನುಭವ ಅಪಾರ, ಭಾಷೆ ಗಂಭೀರ, ಬದ್ಧ, ಮಹಾಕಾವ್ಯದ ಎಲ್ಲ ಲಕ್ಷಣಗಳನ್ನೂ ಒಳಗೊಂಡಿದೆ ಈ ಕಾವ್ಯ–'ಉರ್ವಶಿ' :

ದೇವಸಭೆಯಲಿ ನೃತ್ಯಗೈ
    ಓ ! ಉಲ್ಲಸಿತ, ಪುಲಕಿತ
ವಿಲೋಲ, ಹಿಲ್ಲೋಲ ಉರ್ವಶಿ !
    ನಿನ್ನ ನೃತ್ಯದಿಂದಾಗಿ
ಸಾಗರದೆದೆಯಲಿ
    ಛಂದಛಂದದಿ ನೃತ್ಯಗೈಯುತಿವೆ
ತೆರೆ ತೆರೆಗಳ ದಲಗಳು !
    ಸಮಸ್ತ ಪ್ರಕೃತಿಯೇ
ಕಂಪನಗೊಳ್ಳುತಿದೆ
    ನಿನ್ನ ಮೃದು ಮಧುರಪದಾಘಾತದಿ !
ನಿನ್ನ ಎದೆ ಹಾರದಿಂದ
    ಸೂರೆಗೊಂಡಿವೆ ನಭಮಂಡಲದಲಿ
ನಕ್ಷತ್ರಗಳು ನೂರು ನೂರು !

* * *

ಶ್ರೀ ಅರವಿಂದರು ಹೇಳಿದ ಹಾಗೆ "ರವೀಂದ್ರನಾಥರ ಪ್ರತಿಭೆಯ ಹಿರಿಮೆಯೆಂದರೆ ತಮ್ಮ ಆಂತರಿಕ ಸುಖ ಮತ್ತು ಮೌಲಿಕತೆಯೊಂದಿಗೆ ಅವರು ಸಮಸ್ತ ವೈಷ್ಣವ ಕಾವ್ಯದ ಅಂತಶ್ಚೇತನೆಯನ್ನು ತಮ್ಮ ಆಂತರ್ಯದಲ್ಲಿ ಒಂದಾಗಿಸಿ

ಕೊಂಡು ಅದಕ್ಕೆ ಅಪರೂಪವಾದ ರೂಪವನ್ನು ನೀಡಿದುದು. ಅವರು ಭಾವಾಕುಲ ಮತ್ತು ಉನ್ಮೇಷ ಪ್ರಧಾನ ಧರ್ಮದ ಪುರಾತನ ಮಧುರ ಚೇತನೆಯನ್ನು ಅಧಿಕ ಕೋಮಲಗೊಳಿಸಿದರು, ಸಂಪನ್ನತೆಯೊಂದಿಗೆ ವ್ಯಕ್ತಗೊಳಿಸಿದರು. ಈ ಸಂಪನ್ನತೆಯಲ್ಲಿ ಭಾವಾನುಭೂತಿಯ ಸೂಕ್ಷ್ಮ ಹಾಗೂ ನಾನಾಮುಖಿ ಧ್ವನಿಗಳಿವೆ........

ಮೌಲಿಕ ಕವಿತೆಯ ಸೃಜನಕಾರ್ಯ, ಬುದ್ಧಿ ಅಥವಾ ಹೊರಗಿನ ಕಲ್ಪನೆಗಳಿಂದ ನಡೆಯುವುದಿಲ್ಲ. ಅದು ಹೃದಯದ ಆಳದಲ್ಲಿಯ ಸ್ರೋತದಿಂದ ಹೊರ ಹೊಮ್ಮುತ್ತದೆ. ಅದು ಸಾಮಾನ್ಯ ಮನುಷ್ಯನ ಬುದ್ಧಿಗೆ, ಹೃದಯಕ್ಕೆ ಅಸಾಧ್ಯವಾದುದಾಗಿರುತ್ತದೆ........

....ಸೃಜನದ ಆ ಸಮಯದಲ್ಲಿ ನಮ್ಮಿಂದಲೇ ವ್ಯಕ್ತಗೊಳ್ಳುವ ಆಂತರಿಕ ಚೇತನೆಯ ಆ ವಾಣಿಯನ್ನು ಅರಿಯಲು ನಮ್ಮ ಬುದ್ಧಿ ಸ್ವತಃ ಅಸಮರ್ಥವಾಗುತ್ತದೆ. ಇದುವೇ ಆ ದಿವ್ಯ ಉನ್ಮಾದ ಹಾಗೂ ಉನ್ಮೇಷವಾಗಿದೆ. ಇದನ್ನೇ ಪ್ಲೇಟೋ ತನ್ನ ಸೂಕ್ಷ್ಮ ಆಧ್ಯಾತ್ಮಿಕ ಅನ್ವೇಷಣದ ಸಮಯದಲ್ಲಿ ಉದ್ಘಾಟಿತಗೊಳಿಸಿ ಪ್ರೇರಣೆಯ ಹೆಸರಿನಲ್ಲಿ ಕರೆದ. ರವೀಂದ್ರನಾಥರ ಸಮಸ್ತ ಶ್ರೇಷ್ಠ ಗೀತ-ಕಾವ್ಯ ಇದೇ ಅಗಮ್ಯ ಶಕ್ತಿಯ ಶಿಶುವಾಗಿದೆ...."

ರವೀಂದ್ರರ ಗೀತಗಳು ಸೀಮಾತೀತವಾದ ಸತತವೂ ಆತ್ಮಚೈತನ್ಯದ ಸತ್ಯದ ಸೂಕ್ಷ್ಮಧ್ವನಿಗಳು, ಬೆಳಕಿನ ಕಿರಣಗಳು. ಅವರ ಕಾವ್ಯವಾಣಿಯಲ್ಲಿ, ಅವರ ದರ್ಶನ–ಚಿಂತನದಲ್ಲಿ, ಈ ಯುಗದ ವಿಶ್ವ–ಮಾನವನ ಸಂವೇದನೆ, ಭಾರತದ ಅಂತರಾತ್ಮನ ಪ್ರಕಾಶ, ಒಂದು ಸರ್ವಾಂಗೀಣ ಜೀವನ–ದರ್ಶನದ ರೂಪದಲ್ಲಿ ವ್ಯಕ್ತಗೊಂಡಿರುವುದನ್ನು ಕಾಣುತ್ತೇವೆ.

ತತ್ವಜ್ಞಾನಿಯಾದ, ಅನುಭಾವಿಯಾದ ರವೀಂದ್ರರು ಸಂಸಾರ ಪರಿತ್ಯಾಗಿಯಲ್ಲ. ಸಂಸಾರದಲ್ಲಿದ್ದೇ ಅವರು ತಮ್ಮ ಬದುಕನ್ನು ಮಹತ್ತಾಗಿಸಿದರು. ಅದು ಅವರ ಹೆಚ್ಚುಳಿಕೆ.

*....He was a mystic who never lost touch with the world. He loved "the beautiful dust of the

* Sri R P. Soni - "Tagore Centenary Souveniar" P. 119

earth." He belived that he had come to "the great fair of common human life." From this point of view he represented a movement of thought, called Karma-yoga, which stresses an active life in this world as against the run-away Philosophy of Life preached in this country for over two thousand years....

ರವೀಂದ್ರರು ತಾವಷ್ಟೇ ಸಂಸಾರ ಪರಿತ್ಯಾಗ ಮಾಡಬಯಸಲಿಲ್ಲ; ಪರಿತ್ಯಾಗ ಮಾಡುವವರನ್ನು ಕುರಿತು ಕನಿಕರಪಟ್ಟರು—ಅವರ ಅಜ್ಞಾನಕ್ಕೆ, ಅವರ ಅನುಭವದ ಕೊರತೆಗೆ. ಈ ಮಾರ್ಗದಲ್ಲಿ ಅವರ ಈ ಕವಿತೆ, ಈ ವಿಚಾರ ಧಾರೆಗೆ ಬಹುಮೊಡ್ಡ ಸಾಕ್ಷಿಯಾಗಿದೆ :

*ಒಂದು ಗಹನ ಗಭೀರರಾತ್ರಿ ಸಂಸಾರ
    ಪರಿತ್ಯಾಗ ಮಾಡಬೇಕೆನ್ನುವಾತ
ಯೋಚಿಸಿದ:
    'ಸರಿ, ಇನ್ನು ಗೃಹತ್ಯಾಗಮಾಡಿ
ಪ್ರಭುವಿನ ಶೋಧನೆಯಲ್ಲಿ ಹೊರಟು
    ಹೋಗುತ್ತೇನೆ. ಈ ಮಾಯೆ-ಮೋಹ
ದಲ್ಲಿ ಇನ್ನುವರೆಗೂ ನಾನು ಸಿಲುಕಿ-
    ರುವಂತೆ ಮಾಡಿದವರು ಯಾರೋ ?'
ಪ್ರಭು ಮೆಲ್ಲನೆ ಹೇಳಿದ: 'ನಾನು'.
    ಆದರೆ ವೈರಾಗ್ಯ ತಾಳಿದ ಅವನಿಗೆ
ಕೇಳಿಸಲಿಲ್ಲ.
    ಆಗ ಪ್ರಭುವಿನ ನಿಟ್ಟುಸಿರಿನಲ್ಲಿಯೇ
ಈ ಕೊರಗು ಮೂಡಿತು :
    "ಓ ! ನನ್ನ ಸೇವಕ, ನನ್ನ ಶೋಧನೆಯಲ್ಲಿ
ನನ್ನನೇ ಬಿಟ್ಟು ಎಲ್ಲಿಗೆ ಹೋಗುತ್ತಿಯಾ ?"

ರವೀಂದ್ರರು ಪ್ರಪಂಚವನ್ನು ಪ್ರೀತಿಸಿದರು, ಪ್ರೇಮವನ್ನು ಪ್ರೀತಿಸಿದರು, ಈ ನೆಲವನ್ನು, ಈ ಮಣ್ಣಿನಲ್ಲಿಯ ಸುವಾಸನೆಯನ್ನು, ಹೂಗಳನ್ನು, ಬಳ್ಳಿಗಳನ್ನು, ಸಕಲ ವಿಶ್ವವನ್ನು, ಸಕಲ ಶಾಸ್ತ್ರವನ್ನು, ಈ ದೇಶದ ಭವ್ಯ ಪರಂಪರೆ

*'ವೈರಾಗ್ಯ'

ಯನ್ನು ಪ್ರೀತಿಸಿದರು, ಗೌರವಿಸಿದರು. ಪರಮಾತ್ಮನನ್ನು ಒಲಿಸಲು ಬಂದ ಈ ಕಾಯವನ್ನು ಪ್ರೀತಿಸಿದರು. ಈ ಎಲ್ಲ ಲೌಕಿಕದಲ್ಲಿ ಇದ್ದೂ ಅವರು ಅಲೌಕಿಕರಾಗಿದ್ದರು, ಯಾವ ಬಂಧನದಲ್ಲಿಯೂ ಸಿಲುಕದ ಮಹಾನುಭಾವರಾಗಿದ್ದರು. ಅವರದು ನಿರಂತರ ಯಾತ್ರೆ. ಈ ಯಾತ್ರೆ ಅಂದಂದಿಗೂ ಹೊಸದು. ಈ ಗೀತ ಅವರ ಯಾತ್ರೆಯ ಬೆಳಕಿನಲ್ಲಿ ಬೆಳಕು ಕಂಡಿತು :

* ನಾನು ಯಾತ್ರಿಕ !
ನನ್ನನ್ನು ಮನೆಯ ನಾಲ್ಕುಗೋಡೆಯ
ಮಧ್ಯ ಬಂಧನದಲ್ಲಿರಿಸುವವರಾರು ?
ನಾನು ಯಾತ್ರಿಕ !
ಗೀತೆಗಳನ್ನು ಹಾಡುತ್ತ ನಾನು ಅನಂತ
ಪಥದಲಿ ನಡೆದು ಹೋಗುತ್ತೇನೆ.
ನನ್ನ ದೇಹ-ದುರ್ಗದ ಸಮಸ್ತ ದ್ವಾರಗಳೂ
ತೆರೆದಿವೆ; ವಾಸನೆಯ ಲವಲೇಶವೂ ನನ್ನನ್ನು
ಹಿಡಿಸಲಾರವು. ಹಾಗೆಂತಲೇ ನಾನೀಗ
ಲೋಕ ಲೋಕಾಂತರದಲಿ ಸ್ವಚ್ಛಂದವಾಗಿ
ವಿಹರಿಸುತ್ತಿದ್ದೇನೆ.
ನಾನು ಯಾತ್ರಿಕ !
ಆಕಾಶದಲಿ ಯಾವುದೋ
ಅಜ್ಞಾತ, ನಿಶ್ಶಬ್ದ
ಗೀತಸ್ವರ ನನ್ನನ್ನು ಕರೆಯುತ್ತಿದೆ.
ಯಾರದೋ ಕೊಳಲಿನ
ಮಧುರ–ಗಂಭೀರ ನಾದ
ಬೆಳಗು-ಬೈಗು
ನನ್ನನ್ನು ತನ್ನತ್ತ ಆಕರ್ಷಿಸುತಿದೆ!
ನಾನು ಯಾತ್ರಿಕ !
ಯಾವ ಸಂಜೆ ಯಾವ ಮನೆಯಲಿ
ನಾನು ವಿಶ್ರಮಿಸಬೇಕಾಗಿದೆಯೋ
ಯಾರು ಬಲ್ಲರು ?

---

*ಜಾತ್ರೀ ಆಮಿ ಓರೆ

ಅಲ್ಲಿ ಯಾವ ತಾರಕಾದ್ವೀಪ
ಉರಿಯುವುದೋ; ಯಾರು ಬಲ್ಲರು ?
ನಾನು ಯಾತ್ರಿಕ !
ಯಾವ ಕೋಮಲ ಕುಸುಮ
ತನ್ನ ಸೌರಭದಿಂದ ಮೃದುಲ
ಪವನವನ್ನು ಚಂಚಲಗೊಳಿಸುವುದೋ
ಯಾರು ಬಲ್ಲರು ?
ನಾನು ಯಾತ್ರಿಕ !
ಯಾವ ಸ್ನಿಗ್ಧ ನಯನಗಳು
ಅನಾದಿ ಕಾಲದಿಂದ
ನನ್ನ ಪ್ರತೀಕ್ಷೆಯಲ್ಲಿರುವವೋ
ಯಾರು ಬಲ್ಲರು ?
ನಾನು ಯಾತ್ರಿಕ !

* * *

ಜೀವನದುದ್ದಕ್ಕೂ ಗೀತ ಹಾಡಿದ ನಂತರ ಸ್ವರಸಾಮ್ರಾಟಕವಿ ತನ್ನನ್ನೇ ತಾನು ತನ್ನ ಗೀತಗಳ ಪ್ರಯೋಜನ ಕೇಳುತ್ತ ತಾನೇ ಉತ್ತರಿಸುತ್ತಾನೆ :

ಅಕಾರನೆ ಗಾನ ಗಾಯೀ

ಅಕಾರಣ ಶಬ್ದದ ವ್ಯಾಖ್ಯೆ ನೀಡುತ್ತ ಮತ್ತೆ ಹೀಗೆ ಹೇಳುತ್ತಾನೆ :

ಆಕಾಶ ಭರಾ ಸೂರ್ಯ ತಾರಾ, ವಿಶ್ವಭರಾ ಪ್ರಾನ,
ತಾಹಾರಿ ಮಾಝ್‌ಖಾನೆ ಆಮಿ ಪೆಯೇಂಛಿ ಮೋರಸ್ಥಾನ,
ವಿಸ್ಮಯೇ ತಾಯೀ ಜಾಗೆ ಆಮಾರ ಗಾನ !
ಜಾನಾರ ಮಾಝೆ ಅಜಾನಾರೆ ಕರೇಛಿ ಸಂಧಾನ

ಕೌತುಕ ತುಂಬಿದ ವಿಶ್ವವನ್ನು ನೋಡಿ ಕವಿಯ ಹೃದಯದಲ್ಲಿ ವಿಸ್ಮಯತೆ ಜಾಗೃತವಾಗುತ್ತದೆ. ನೋಡಿದ, ನೋಡದ ಎಲ್ಲ ವಸ್ತುಗಳಲ್ಲಿಯೂ ಅಪರಿಚಿತ, ಅಜ್ಞಾತ ಪ್ರಿಯತಮನ ಶೋಧದಲ್ಲಿ ಗೀತ ಪಾಡಲುದ್ಯುಕ್ತನಾಗುತ್ತಾನೆ. ರೂಪದಲ್ಲಿ ಅರೂಪವನ್ನು ಕಾಣಲು ಪ್ರಾರಂಭಿಸುತ್ತಾನೆ, ಸೀಮಿತ ವಿಶ್ವದಲ್ಲಿ ಅಸೀಮನ ಅನ್ವೇಷಣೆ ಆರಂಭವಾಗುತ್ತದೆ.

ಕವಿಯ ಹೃದಯದಲ್ಲಿ ವ್ಯಾಕುಲತೆ ತುಂಬಿಕೊಳ್ಳುತ್ತದೆ. ಒಂದು ರೀತಿಯ ಪಿಪಾಸೆ ಆತನನ್ನು ಅಶಾಂತಿಗೀಡು ಮಾಡುತ್ತದೆ. ಹಾಗಾದಾಗಲೆಲ್ಲ ಆತ ಹಾಡಲು ಪ್ರಾರಂಭಿಸುತ್ತಾನೆ :

ಚಿತ್ತ ಪಿಪಾಸಿತರೆ, ಗೀತ ಸುಧಾರ ತರೆ
ಆಜಿ ವಸಂತ ನಿಶಾ, ಆಜಿ ಅನಂತ ತೃಷಾ, ಆಜಿ ಜಾಗೃತಪಾನ
ತೃಷಿತ ಚಕೋರ ಸಮಾನ, ಗೀತ ಸುಧಾರ ತರೆ

ಮನಸದ ಅದೇ ವ್ಯಾಕುಲತೆ ಆತನಿಗೆ ಸಂಪೂರ್ಣ ವಿಶ್ವದಲ್ಲಿ ವ್ಯಾಪ್ತಿಗೊಂಡ ಹಾಗೆ ತೋರುತ್ತದೆ. ಆಗ ಆತ ಮತ್ತೆ ಹಾಡುತ್ತಾನೆ:

ಏಕಿ ಆಕುಲತಾ ಭುವನೆ ಏಕಿ ಚಂಚಲತಾ ಪವನೆ

ತನ್ನ ಇಷ್ಟದ ಶೋಧನೆಯಲ್ಲಿ ಕವಿ ಗೀತವನ್ನು ಪಾಡುತ್ತ ಅನಂತ, ಅಸೀಮ ಪಥದಲ್ಲಿ ಸಾಗುತ್ತಿರುವಂತೆಯೇ ಆತನ ಕಾವ್ಯವಾಣಿ ನಿನದಿಸುತ್ತದೆ:

ಆಮಿ ಪಥ ಭೂಲಾ ಪಥಿಕ ಏಸೇಛಿ

ವಿಶ್ವಕ್ಕೇನೆ ಹೊಸ ಬೆಳಕನ್ನು, ಹೊಸ ದೃಷ್ಟಿಯನ್ನು ನೀಡಿದ ಈ ಮಹಾ ಪುರುಷ "ನಾನು ಪಥವನ್ನು ಮರೆತ ಪಥಿಕನಿದ್ದೇನೆ" ಎಂದು ಹೇಳಿದ. ಅದು ಆ ಮಾತು ಭಗವಂತನ ಶೋಧನೆಯಲ್ಲಿ ಹೊರಟಾತನ ಕಿಂಕರತ್ತ್ವ. ಆ ಕಿಂಕ ರತ್ತ್ವವೇ ರವೀಂದ್ರರಿಗೆ ಶಂಕರತ್ತ್ವ ತಂದುಕೊಟ್ಟಿತು.

ತಮ್ಮ ಇಷ್ಟದೇವನ ಶೋಧನೆಯಲ್ಲಿ ಹೊರಟ ಕವಿ ಆ ಸೀಮಾತೀತ ನನ್ನು ಕುರಿತು ಹಾಡಿದ ಪರಿ ಹೀಗೆ:

ಸೀಮಾರ ಮಾಝೆ, ಅಸೀಮ, ತುಮಿ ಬಾಜಾವೋ ಆಪನ ಸುರ
ಆ ಮಾರ ಮಧ್ಯೆ, ತೋಮಾರ ಪ್ರಕಾಶ ತಾಯಿ ಏತ ಮಧುರ

ತಮ್ಮ ಸೀಮಾಯುಕ್ತತೆಯಲ್ಲಿ ಅಸೀಮನಾದ ಆ ಪರಬ್ರಹ್ಮ ಸ್ವರ ಸ್ಪಂದನಗೊಳಿಸುತ್ತಿರುವದನ್ನು ಅವರು ಅನುಭವಿಸಿದರು. ಭಗವಂತ ಅವರಲ್ಲಿ ತನ್ನ ಮಧುರವಾದ ಪ್ರಕಾಶವನ್ನು ತುಂಬುತ್ತಿರುವುದರ ರೋಮಾಂಚನ ಯುಕ್ತವಾದ ಅನುಭವವೂ ಅವರದಾಯಿತು.

ಕವಿಯ ಈ ಹೃದಯ ಸ್ಪಂದನ ಕ್ಷಿತಿಜದಲ್ಲೆಲ್ಲ ಸ್ವರವಾಗಿ ಪ್ರತಿಧ್ವನಿಸಿತು. ವಿಶ್ವಸಂಗೀತದ ಅನಂತಸ್ವರ ಕವಿಯ ಹೃದಯವನ್ನು ಸ್ಪರ್ಶಿಸುತ್ತಿದೆ. ಆತನ ಹೃದಯ ವೀಣೆಯ ತಂತಿಗಳನ್ನು ಮೀಟಿ ಅಸೀಮ ಪ್ರೇಮದಿಂದ ಝೇಂಕೃತ ಗೊಳ್ಳುತಿವೆ. ವಿಶ್ವವೀಣೆ ಹಾಗೂ ಕವಿಯ ಹೃದಯ ವೀಣೆಯಲ್ಲಿ ಇಂತಹ ಅಮೋಘವಾದ ತಾಲಬದ್ಧತೆಯಿದೆ, ಎರಡರ ತಂತಿಗಳೂ ಸಮಸ್ವರದಿಂದ ಬಂಧಿತಗೊಂಡಿವೆ–ಒಂದನ್ನು ಸ್ಪರ್ಶಿಸಿದರೆ ಸಾಕು, ಮತ್ತೊಂದು ತನ್ನಷ್ಟಕ್ಕೆ

ತಾನೇ ಝೇಂಕೃತಗೊಳ್ಳುತ್ತದೆ. ವಿಶ್ವಾತ್ಮನ ಬಗೆಗೆ ಕವಿಯಲ್ಲಿರುವ ಈ ಸಮಭಾವ, ಈ ಸಮವೇದನೆಯೇ ರವೀಂದ್ರರನ್ನು ವಿಶ್ವಕವಿಯನ್ನಾಗಿಮಾಡಿತು.

ವಿಶ್ವಾತ್ಮನೊಂದಿಗೆ ಸ್ನೇಹ ಹಾಗೂ ಮಮತೆಯ ಈ ಅಭೂತಪೂರ್ವವಾದ ಅನುಭೂತಿ ರವೀಂದ್ರರ ಆತ್ಮದಲ್ಲಿ ಸದಾ ಜಾಗೃತವಾಗಿತ್ತು. ಆ ಜಾಗೃತಿಯೇ ಅವರಿಂದ ಅಮರ ಕಾವ್ಯದ ಸೃಜನ ಕಾರ್ಯವನ್ನು ಮಾಡಿಸಿತು. ವಿಶ್ವಾತ್ಮನೊಂದಿಗೆ ಏಕತ್ವಹೊಂದುವ ಈ ಅನಂತ ಹುಡುಕುವಿಕೆಯೇ ರವೀಂದ್ರರಿಗೆ ಅಪಾರವಾದ, ಅಮೋಘವಾದ ಆನಂದವನ್ನು, ತನ್ಮಯತೆಯನ್ನು, ಉಲ್ಲಾಸವನ್ನು ಇತ್ತಿತು. ಅಂತೇ ರವೀಂದ್ರರು ವಿಶ್ವಗಾಯಕರಾದರು. ವಿಶ್ವವಂದ್ಯರಾದರು. ವಿಶ್ವದ ಸಚರಾಚರ ವಸ್ತುವಿನಲ್ಲಿ ಅವರು ಭಗವಂತನ ಮೌನಸಂಗೀತ ಕೇಳಿದರು. ಸಾವಿನಲ್ಲಿ ಜೀವನದ ಬೆಳಕನ್ನು ಕಂಡ ಮಹಿಮರು.

ತಮ್ಮ ಕಾವ್ಯದ ಸೃಜನ ಶಕ್ತಿ ತಾವಲ್ಲವೆಂಬುದರ ಪ್ರಜ್ಞೆ ಅವರಿಗೆ ಸದಾ ಇತ್ತು. ಒಂದೆಡೆ ಅವರೇ ಹೀಗೆ ಹೇಳಿದ್ದಾರೆ: “ನಾನು ಏನೆಲ್ಲ ಬರೆದಿರುವೆನೋ ಅದನ್ನೆಲ್ಲ ನಾನು ಬರೆಯಲಿಲ್ಲ. ಯಾವುದೋ ಒಂದು ಅದೃಶ್ಯ ಶಕ್ತಿ ನನ್ನಿಂದ ಬರೆಯಿಸಿದೆ” ಎಂದು.

ಆ ಅವ್ಯಕ್ತ ಶಕ್ತಿಯನ್ನು ಕುರಿತು ಅವರು ಹಾಡಿದರೂ ಕೂಡ :

ಏಕಿ ಕೌತುಕ ನಿತ್ಯನೂತನ, ಉಗೋ ಕೌತುಕಮಯೀ
ಆಮಿ ಜಾಹಾ ಕಿಛೂ ಚಾಹಿ ಬಲ ಬಾರೆ ಬಲಿತೆ ದಿಲೆಛೆ ಕಹ –
ಅಂತರ ಮಾಝೆ ಬಸಿ ಅಹರಹ
ಮುಖ ಹತೆ ತುಮಿ ಭಾಷಾ ಕಡೆ ಸಹ,
ಮೋರ ಕಥಾ ಲಯೆ ತುಮಿ ಕಥಾ ಕಡೆ
ಮಿಶಾಯ ಆಪನ ಸುರೆ
ಕೀ ಬಲಿತೆ ಚಾಯೀ ಸಬ ಭೂಲ ಜಾಯೀ
ತುಮಿ ಯಾ ಬಲಾಊ ಆಮಿ ಬಲಿತಾಯೀ
ಓ ! ವಿಶ್ವಸುಂದರಿ,
ಕೌತುಕಮಯಿ
ನನ್ನ ಹೃದಯದಲಿ ನೆಲಿಸಿಹೆ!
ನನ್ನ ಭಾಷೆ, ನನ್ನ ಕಥೆಯನು

ನಿನ್ನದೇ ಸ್ವರದಲಿ ಬರೆಯುತಿಹೆ !
ಓ ! ವಿಶ್ವಸುಂದರಿ,
ಕೌತುಕಮಯಿ !
ನಾನು ಹೇಳಬೇಕಾದುದೆಲ್ಲವನು
ಓ ! ತಾಯೇ,
ನಾನು ಹೇಳಲಾರದವನಾಗಿದ್ದೇನೆ.
ಕೇವಲ ನೀನು ಬಯಸಿದ್ದನ್ನು
ಅಷ್ಟನ್ನೆ ನಾನಿಲ್ಲಿ ಹೇಳುತ್ತಿದ್ದೇನೆ.
ಓ ! ವಿಶ್ವಸುಂದರಿ,
ಕೌತುಕಮಯಿ
ನನ್ನ ಹೃದಯದಲ್ಲಿ ನೆಲಿಸಿಹೆ !

ಸಾವಿರ ಸಾವಿರ ಸಂಖ್ಯೆಯಲ್ಲಿ ಗೀತಗಳನ್ನು ಹಾಡಿಯೂ ರವೀಂದ್ರರ ಮನ ತೃಪ್ತಿಪಡೆದಿರಲಿಲ್ಲ– "ನಾನು ಏನನ್ನು ಬರೆಯಬೇಕೆನ್ನುತ್ತಿದ್ದೆನೋ ಅದನ್ನು ಬರೆಯಲಾಗಲಿಲ್ಲ. ಏನನ್ನು ಹೇಳಬೇಕೆನ್ನುತ್ತಿದ್ದೆನೋ ಅದನ್ನು ಹೇಳಲಾಗಲಿಲ್ಲ. ನನ್ನ ವೇದನೆ ನನ್ನ ಮನದಲ್ಲಿಯೇ ಉಳಿಯಿತು" ಎಂದು ಅವರು ಹಲವಾರು ಸಲ ವ್ಯಕ್ತಮಾಡಿದ್ದುಂಟು. ಅವರ ಸೃಜನಶಕ್ತಿ ವಿಶ್ವಾತ್ಮನ ಶಕ್ತಿ.

ಓ ! ಪ್ರಿಯತಮ
ಯಾವ ಹಾಡನ್ನು ಹಾಡಲೆಂದು
ಈ ನಿನ್ನ ಸಭೆಯಲ್ಲಿ ಬಂದಿದ್ದೆನೋ
ಆ ಹಾಡನ್ನು ಇಂದಿನವರೆಗೂ
ಹಾಡಲಾಗಲಿಲ್ಲ !
ಈ ಸಮಸ್ತ ಜೀವನ
ಕೇವಲ ವೀಣೆಯ ತಂತಿಗಳ
ಸ್ವರ ಸಾಧನೆಯಲ್ಲಿಯೇ ಕಳೆಯಿತು !

ಅನಂತತೆಯ ಈ ಅನ್ವೇಷಣೆಯಲ್ಲಿ ಹೃದಯದಿಂದ ಸಹಸ್ರಾರು ಗೀತಗಳು ಹೊರಹೊಮ್ಮಿದವು. ಒಂದೇ ಕಥೆಯನ್ನು ಹೇಳುವುದಕ್ಕಾಗಿ ರವೀಂದ್ರರಿಗೆ ಸಹಸ್ರ ಸಹಸ್ರ ಕಾವ್ಯದ ರಚನೆ ಮಾಡಬೇಕಾಯಿತು. ಆದರೆ ಆ ಎಲ್ಲ ಕಾವ್ಯ ಒಂದೇ ಒಂದು ಕಥೆಯಲ್ಲಿ ವಿಲೀನಗೊಂಡವು :

ಮನೆ ಹಯಕೀ ಏಕಹಿ ಶೇಷ ಕಥಾ ಆಛೆ,
ಸೆ ಕಥಾ ಹಯೀಲೆ ಬಲಾ ಸಬ ಬಲಾಹಯ
ಶತಗಾನ ಉಠಿತೆ ಛಿ ತಾರಿ ಅನ್ವೇಷಣೆ,
ಪಾಖಿರ ಮತನ ಧಾಯ ಚರಾಚರಮಯ
ಶತಗಾನ ನೂತನ ಜೀವನೆ
ಏಕಹಿ ಕಥಾಯ ಚಾಹೆ ಹಯಿತೆ ವಿಲಯ !

*          *          *

ರವೀಂದ್ರರು ಯೋಗಿಗಳಾಗಿದ್ದರು. ಹಾಗೆಂತಲೇ ಅವರು ಬದುಕಿನ ಅವಿಚ್ಛಿನ್ನ ಮತ್ತು ಪ್ರಗತಿಶೀಲ ಪರಂಪರೆಯನ್ನು, ಜಡತೆ ಹಾಗೂ ಮೃತ ಪ್ರಾಯದ ಆವರಣಗಳಿಂದ ಮುಕ್ತಗೊಳಿಸಿದರು. ವೇದ, ಉಪನಿಷತ್ತು, ಪುರಾಣ ಹಾಗೂ ಮಹಾಪುರುಷರ, ಜೀವನದಲ್ಲಿಯ ದಿವ್ಯತೆ ಯನ್ನು ತಮ್ಮಲ್ಲಿ ಅವಗತ ಮಾಡಿಕೊಂಡು ಅಲ್ಲಿಯ ಮೂಲ ಚೇತನೆಯನ್ನು ಇಂದಿನ ಮಾನವ ಜೀವನ-ಚೇತನೆಯೊಂದಿಗೆ ಕೂಡಿಸಿದ ಅವರ ರೀತಿ ಅಪೂರ್ವ.

ಭಗವಂತನ ಈ ಸೃಷ್ಟಿಯನ್ನು ಅವರು ಎಂದೂ ಅವಹೇಳನ ಮಾಡಲಿಲ್ಲ. ಸಂಸಾರ ಪರಿತ್ಯಾಗ ಮಾಡುವುದರಿಂದಲೇ ಮುಕ್ತಿ ಸಿಗುವುದಾದರೆ ಅಂತಹ ಮುಕ್ತಿ ತಮಗೆ ಬೇಡವೆಂದು ಹೇಳಿದ ಮಹಾಧೀರರು. ವಿರಾಗದ ಆ ಮುಕ್ತಿಯ ಸ್ಥಳದಲ್ಲಿ ಪಾರ್ಥಿವ ಜೀವನದ ಪ್ರಗತಿಶೀಲವಾದ ಮತ್ತು ದಿವ್ಯವಾದ ಸಿದ್ಧಿಯನ್ನು ಪ್ರತಿಷ್ಠೆಗೊಳಿಸಿದ ಹಿರಿಮೆ ರವೀಂದ್ರರದು.

ಈ ಕಾರಣದಿಂದಲೇ ರವೀಂದ್ರರ ಕಾವ್ಯದಲ್ಲಿ ಜೀವನ-ದರ್ಶನದಲ್ಲಿ,- ಜೀವನ-ಮುಕ್ತಿ, ಭೋಗ-ತ್ಯಾಗ, ಭೌತಿಕ-ಆಧ್ಯಾತ್ಮಿಕ, ಇಂದ್ರಿಯ-ಇಂದ್ರಿಯಾತೀತಗಳ ಅಮೋಘ ಸಮನ್ವಯವನ್ನು ಕಂಡು ಬೆರಗಾಗುತ್ತೇವೆ.

ಅವರ ಕಾವ್ಯ ಚಿರಂತನವೂ, ನವನವೋನ್ಮೇಷಶಾಲಿನಿಯೂ, ಪ್ರಗತಿ ಶೀಲವೂ ಆಗಿದೆ. ಆದುದರಿಂದ ರವೀಂದ್ರರ ದಿವ್ಯವಾಣಿಯಲ್ಲಿಯ ಚೇತನ ಶಕ್ತಿ ಯುಗ ಯುಗಾಂತರದಲ್ಲೂ ಸಚೇತವಾಗಿದೆ.

* ....Tagore is essentially a mystic; but his mysticism is simple and beautiful, not obscure...His

*Sri. R. I. Paul : 'Tagore-A Mystic' in a "T.C.Souvenir." P.349

poems contain the fragrance of the sweetest flowers of passionate mystic thought and emotion...

ಅವರ ಬದುಕು, ಅವರ ಕಾವ್ಯ ಅದೊಂದು ಆಲೋಕ, ಅದೊಂದು ಜ್ಯೋತಿರ್ಮಯಿ.

ರವೀಂದ್ರರು ಈ ಸಕಲ ಸೃಷ್ಟಿಯನ್ನು ಮಾಯೆಯೆಂದು ಎಂದೂ ಭಾವಿಸಲಿಲ್ಲ. ಅಸಂಖ್ಯಾತ ವರ್ಣಗಳಿಂದ ರಂಜಿತವಾಗಿರುವ, ಅಪಾರ ಸೌಂದರ್ಯದಿಂದೊಡಗೂಡಿರುವ ಈ ವಿಶ್ವ ಸರ್ವಶಕ್ತನಾದ ಆ ಪರಮಾತ್ಮನ ಆನಂದದ ಪ್ರತೀಕವಾಗಿ ಪ್ರಾದುರ್ಭಾವಗೊಂಡಿದೆ. ಇದನ್ನು ಆಚೆ ಇರಿಸಲು ಇದು ಕನಸಲ್ಲ, ಇದು ಮಾಯೆಯಲ್ಲ. ಇದು ಆತನ ಪರಮೋತ್ಕೃಷ್ಟ ಲೀಲೆ ಎಂಬ ಮಹೋನ್ನತ ವಿಚಾರ ಅವರದು.

* * *

'ಗೀತಾಂಜಲಿ'–ವಿಶ್ವಾತ್ಮನ ಚರಣಕಮಲದಲ್ಲಿ ತನ್ನನ್ನು ಸರ್ವಾರ್ಪಣ ಭಾವದಿಂದ ಅರ್ಪಿಸಲೋಸುಗವೇ ಕವಿ ಈ ಗೀತಗಳ ಮಾಧ್ಯಮ ಪಡೆದನೆಂದು ತೋರುತ್ತದೆ. ಇಲ್ಲಿರುವ ಒಂದೊಂದು ಗೀತವೂ ಛಂದೋಬದ್ಧ, ಸಂಗೀತಮಯ, ಓತಪ್ರೋತವಾಗಿರುವ ಸ್ವರ-ಪ್ರವಾಹದಿಂದೊಡಗೂಡಿದೆ. ಇಲ್ಲಿ ಎಲ್ಲಿಯೂ ವಿಷಾದ, ಅಶಾಂತಿ, ಸಂಶಯಗ್ರಸ್ತ ಮನದ ಆಕ್ರಂದನದ ಸುಳಿವೇ ಇಲ್ಲ, ಇಲ್ಲಿರುವುದು ಕೇವಲ ಅಲೌಕಿಕ ಆಶೆ, ಆಹ್ಲಾದ, ಆನಂದ, ಭಗವಂತನ ಚಿಂತನೆ, ಬೆಳಕಿನ ಅಮಿತವಾದ, ಹಿತವಾದ ಪ್ರಕಾಶ. ಈ ಸಂಸಾರ ಸಾಗರದಿಂದ ಸುರಕ್ಷಿತವಾಗಿ ಮಾನವನನ್ನು ಆಚೆ ದಡ ತಲುಪಿಸುವ ದೋಣಿ ಇದು. ಇದರಲ್ಲಿ ಜೀವನದ ಅಮರ ಸಂದೇಶವಿದೆ, ಜೀವನದ ಪ್ರೇರಣೆಯಿದೆ, ಇದೊಂದು ಪೂರ್ಣರೂಪದ, ಸರ್ವಶಕ್ತಿದಾಯಕವಾದ ಅಮರ ಕೃತಿ.

ಮೂಲ ಬಂಗಾಲದಲ್ಲಿರುವ 'ಗೀತಾಂಜಲಿ' 'ನೈವೇದ್ಯ' 'ಖೇಯಾ'–ಈ ಮೂರು ಸಂಗ್ರಹಗಳಿಂದ ಆರಿಸಿ ಶ್ರೀ ದೀನಬಂಧು ಎಂಡ್ರೂಜ ಅವರ ಪ್ರೇರಣೆಯ ಮೇರೆಗೆ ಒಂದುನೂರಾಮೂರು ಗೀತಗಳನ್ನು ಇಂಗ್ಲೀಷಿಗೆ ತಾವೇ ಅನುವಾದಿಸಿ, ಈ ಸಂಗ್ರಹಕ್ಕೆ "ಗೀತಾಂಜಲಿ" ಎಂದು ಹೆಸರಿಟ್ಟರು. ಇದಕ್ಕೇನೆ 'ನೋಬೆಲ್' ಬಹುಮಾನ ದೊರೆಯಿತು. ಈ ಶತಮಾನದ ಇನ್ನೊಬ್ಬ ಮಹಾಕವಿ ಶ್ರೀ ವಿಲಿಯಂ ಬಟ್ಲರ್ ಯೀಟ್ಸ್ ಅವರು ಈ ಸಂಗ್ರಹಕ್ಕೆ ಪ್ರಸ್ತಾವನೆ ಬರೆ

ಯುತ್ತ "....I have carried the manuscript of these translations about with me for days, reading it in railaway trains, or on the top of omnibuses and in restaurants, and I have often had to close it lest some stranger would see how much it moved me. these lyrics-which are in the original, my Indians tell me, full of subtlety of rhythm, of untranslatable delicacies of colour, of metrical invention-display in their thought a world I have dreamed of all my life long. the work of a supreme culture..." ಎಂದಿದ್ದಾರೆ.

ವಿಶ್ವಕವಿಯ ಕೃತಿಗಳ ಅನುವಾದ ಜಗತ್ತಿನ ಎಲ್ಲ ಭಾಷೆಗಳಲ್ಲಿಯೂ ಆಗಿವೆ. ಜರ್ಮನ ಭಾಷೆಯಲ್ಲಿಯೇ 'ಗೀತಾಂಜಲಿ'ಯ ಪ್ರತಿಗಳು ಐವತ್ತು ಲಕ್ಷಕ್ಕಿಂತಲೂ ಹೆಚ್ಚು ಮಾರಾಟವಾಗಿವೆ. ಈ ಶತಮಾನದಲ್ಲಿ 'ಗೀತಾಂಜಲಿ'ಯಷ್ಟು ಇನ್ನಾವ ಗ್ರಂಥವೂ ಲೋಕಪ್ರಿಯವೆನಿಸಲಿಲ್ಲ. ಅದೊಂದು ಅಮೋಘಕೃತಿ.

* * *

ಭಾರತಕ್ಕೆ ರಾಷ್ಟ್ರಗೀತೆಯನ್ನು ನೀಡಿದ ಪುಣ್ಯಪುರುಷರು ರವೀಂದ್ರರು. ಅವರ ಈ ರಾಷ್ಟ್ರಗೀತೆ ಸರ್ವಶಕ್ತನಾದ ಪರಮಾತ್ಮನ ಸ್ಮರಣೆ, ಘೋಷಣೆ ಮಾಡುವದಲ್ಲದೆ ಭಾರತದ ಭೌಗೋಲಿಕ ಹಾಗೂ ಸಾಂಸ್ಕೃತಿಕ ಏಕತೆಯನ್ನು ಉದ್ಘೋಷಿಸುತ್ತದೆ. ಅದು ಆ ಗೀತ :

ಜನ-ಗಣ-ಮನ-ಅಧಿನಾಯಕ ಜಯ ಹೇ
ಭಾರತ ಭಾಗ್ಯ-ವಿಧಾತಾ ।
ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ
ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿ-ತರಂಗ ।
ತವ ಶುಭ ನಾಮೆ ಜಾಗೇ
ತವಶುಭ ಆಶಿಷ ಮಾಗೇ

ಗಾಹೇ ತವ ಜಯಗಾಥಾ ।
ಜನ-ಗಣ-ಮಂಗಲ–ದಾಯಕ, ಜಯಹೇ
ಭಾರತ–ಭಾಗ್ಯ_ವಿಧಾತಾ ।
ಜಯಹೇ, ಜಯಹೇ, ಜಯಹೇ
ಜಯ ಜಯ ಜಯ, ಜಯಹೇ ।

ಶ್ರೇಷ್ಠವಾದ ಈ ಹಾಡಿನಲ್ಲಿ ಸಂಗೀತದ ಮಾಧುರ್ಯ ಪ್ರತಿ ಶಬ್ದ ದಲ್ಲಿಯೂ ಹೊರ ಹೊಮ್ಮುತ್ತಿರುವುದನ್ನು ಕಾಣುತ್ತೇವೆ. ಸಂಗೀತದ ಜೀವಾಳವಾದ ಭಾವವಿದೆ, ರಾಗವಿದೆ, ತಾಳವಿದೆ–ಇಲ್ಲಿ.

ಭಾರತದ ಬಗೆಗೆ ಅಪಾರವಾದ ಭಕ್ತಿ, ಪ್ರೀತಿ, ಗೌರವವನ್ನು ತಮ್ಮ ಅಸಂಖ್ಯಾತ ಗೀತಗಳಲ್ಲಿ ವ್ಯಕ್ತಪಡಿಸಿರುವದಲ್ಲದೆ, * "I Shall be born in India again and again. With all her poverty, misery and wretchedness, I love India best...." ಎಂದಿದ್ದಾರೆ.

ರವೀಂದ್ರರ ಕಾವ್ಯದ ಅರ್ಥ ಎಲ್ಲರಿಗೂ ತಿಳಿಯದೆ ಹೋದರೂ ಕೂಡ ಸಮಸ್ತ ವಿಶ್ವದಲ್ಲಿಯ ಎಲ್ಲ ಜನರೂ ಅವರ ಸ್ವರದಲ್ಲಿ ಸ್ವರಕೂಡಿಸಿ ಹಾಡಿದ್ದಾರೆ, ಹಾಡುತ್ತಿದ್ದಾರೆ.. ಹಾಡುತ್ತ ಹಾಡುತ್ತ ಎಲ್ಲರ ಹೃದಯ ಆನಂದ ದಿಂದ ಪುಲುಕಿತಗೊಂಡಿದೆ, ಪುಲುಕಿತಗೊಳ್ಳುತ್ತಿದೆ. ಅವರ ಗೀತಗಳು ವಿಶ್ವದ ಸಮಸ್ತ ಜನಾಂಗದ ಆತ್ಮವನ್ನೇ ಆಕರ್ಷಿಸಿದೆ, ಆಕರ್ಷಿಸುತ್ತಿದೆ. ಅದುವೇ ರವೀಂದ್ರರ ಕಾವ್ಯದ ಹಿರಿಮೆ, ಶ್ರೇಷ್ಠತೆ.

ರವೀಂದ್ರರ ಸ್ಮೃತಿ ಭಾರತದ ಕೃತಜ್ಞ ಮಾನಸದಲ್ಲಿ ಸದಾ ಸಜೀವ ವಾಗಿದೆ, ಕೇವಲ ಸ್ಮೃತಿಯಲ್ಲಲ್ಲ, ಎಲ್ಲ ಸಾಂಸ್ಕೃತಿಕ ಸ್ಪಂದನಗಳಲ್ಲಿ ರವೀಂದ್ರರು ಯುಗ–ಯುಗಗಳವರೆಗೂ ಜೀವಂತವಾಗಿದ್ದಾರೆ.

* Tagore Centenary Souvenir - P. 125

# ರವೀಂದ್ರರ ಕೆಲವು ಗೀತಗಳು

# ನೂರು ವರುಷಗಳ ಅನಂತರ....

ಇಂದಿನಿಂದ ನೂರು ವರುಷಗಳ ಅನಂತರ....
 ಶಾಂತವಾದ ವಾತಾವರಣದಲ್ಲಿ, ಬಕುಲ
ಗಿಡದಡಿಯಲ್ಲಿ ಕುಳಿತು, ತುಂಬಿದ ಹೃದಯ
ದಿಂದ, ಕುತೂಹಲ ಪೂರಿತ ಮನದಿಂದ
ನನ್ನ ಕವಿತೆಗಳನ್ನು ಓದುತ್ತಿರುವ
ನೀನು ಯಾರು ?
ಇಂದಿನಿಂದ ನೂರು ವರುಷಗಳ ಅನಂತರ....

 ಇಂದಿನ ಈ ನವ ವಸಂತದ
ಆನಂದದ ಇನಿತು ಭಾಗವನ್ನಾದರೂ
ಇಂದಿನ ಯಾವುದೊ ಒಂದು ಕುಸುಮದ
ಮಕರಂದದ ಇಲ್ಲವೆ ತುಂಬಿಯ ಗಾನದ
ಸವಿಯ ಇನಿತು ಅಂಶವನ್ನಾದರೂ,
ಇಂದಿನ ಅನುರಾಗರಂಜಿತವಾದ
ಪ್ರೇಮಗಾನದಲ್ಲಿಯ ತನ್ಮಯತೆಯ,
ಮಾದಕತೆಯ ಲೇಶಮಾತ್ರವನ್ನಾದರೂ,
ನಿನ್ನೆದೆಯ ಬಾಗಿಲವರೆಗೂ ನನ್ನ
ಕವಿತೆಯ ಮುಖಾಂತರ ತಲುಪಿಸ
ಬಲ್ಲೆನೆ ನಾನು ?
ಇಂದಿನಿಂದ ನೂರು ವರುಷಗಳ ಅನಂತರ....

 ಒಂದು ಸಲ, ಒಮ್ಮೆಯಾದರೂ ನೀನು
ತೆಂಕಣದ ಬಾಗಿಲನ್ನು ತೆರೆ; ಕಿಟಕಿಯ ಬಳಿ
ಕುಳಿತು ಬಹುದೂರ ದಿಗಂತದೆಡೆ ನೋಡುತ್ತ,

ಕಲ್ಪನಾಸಾಗರದಲ್ಲಿ ಅವಗಾಹನ ಮಾಡುತ್ತ,
ಮನದೊಳಗೆ ಬಗೆದು ಭಾವಿಸಿ ನೋಡು;
ಇಂದಿಗೆ ನೂರು ವರುಷಗಳ ಪೂರ್ವದಲ್ಲಿ....

ಒಂದು ದಿನ ಹೀಗೆಯೆ, ಯಾವುದೋ
ವಸಂತಮಾಸದಲ್ಲಿ, ಯಾವ ಸ್ವರ್ಗದಿಂದಲೊ
ಚಂಚಲ ಪುಲಕರಾಶಿ ತೇಲಿ ಬಂದು ಅಖಿಲ
ವಿಶ್ವದ ಮರ್ಮಸ್ಥಲವನ್ನೇ ಸೋಂಕಿ
ನವಿರೇಳಿಸಿತ್ತು; ಆಗ ಅದೇ ಹೊಸತಾಗಿ
ಬಂದ ಫಾಲ್ಗುಣದ ಬಂಧನರಹಿತ
ದಿನಗಳು ಉನ್ಮತ್ತವಾಗಿದ್ದವು; ಅಧೀರವಾಗಿದ್ದವು

ತನ್ನ ಚಂಚಲ ನಯನಗಳಿಂದ ಎಣ್ದೆಸೆಗೂ
ಪುಷ್ಪ ಪರಾಗವನ್ನು ಹರಡುತ್ತ ದಕ್ಷಿಣ
ಸಮೀರನು ದ್ರುತವೇಗದಿಂದ ಸುಳಿದು
ಪ್ರಕೃತಿಯ ಚೆಲುವನ್ನು ಹೆಚ್ಚಿಸಿ, ಯೌವನ
ರಾಗದಿಂದ ರಂಜಿತಗೊಳಿಸಿದ್ದನು, ಈ
ಭೂಮಿಯನ್ನು, ನಿನಗಿಂತಲೂ-ನೂರು ವರುಷ
ಗಳ ಪೂರ್ವದಲ್ಲಿ....

ಅಂದು ಆ ದಿನದಂದು, ಉತ್ಕಂಠಿತ ಮನ-
ಪ್ರಾಣ-ಗೀತಗಳಲ್ಲಿ ಒಬ್ಬಾನೊಬ್ಬ ಕವಿಯ
ಹೃದಯವು ಮಗ್ನವಾಗಿದ್ದಿತು; ಚೆಲುವನು
ಆರಾಧಿಸುವ ಆ ಕವಿ ಹೃದಯದಲ್ಲಿ ಅಂದು
ಅನುರಾಗದಿಂದ ಮೈದಳೆದು ಬಂದ ಎನಿತೆನಿತೋ
ಪ್ರೀತಿ-ಪ್ರೇಮದ ಮಾತುಗಳು, ಜೇನ್ನುಡಿಗಳು
ಹೂಗಳ ಹಾಗೆ ಅರಳಬೇಕು, ಅಷ್ಟು
ಸೂಕ್ಷ್ಮವಾಗಿ ವಿಕಸಿತವಾಗಬೇಕೆಂದು
ಆಸೆ ಹೊತ್ತಿದ್ದವು; ತವಕಗೊಂಡಿದ್ದವು

ಒಂದು ದಿನ – ಇಂದಿಗೆ ನೂರು ವರುಷಗಳ
ಪೂರ್ವದಲ್ಲಿ....

ಇಂದಿನಿಂದ ನೂರು ವರುಷಗಳ ಅನಂತರ;
ನಿನ್ನ ಮನೆಯೊಳಗೆ ಕೋಕಿಲ ಕಂಠದಿಂದ
ಹಾಡುತಲಿರುವ ಆ ನೂತನ ಕವಿ ಯಾರು ?
ನನ್ನ ಜೀವನದಲ್ಲಿರುವ ಈ ಮಧುರ
ವಾತಾವರಣವನ್ನು, ವಾಸಂತಿಯ
ಪರಾಗವನ್ನು, ಉಲ್ಲಾಸವನ್ನು
ಪ್ರಕೃತಿಯ ಸೌಂದರ್ಯವು ನನಗಿತ್ತ
ಆನಂದ ಸ್ಫೂರ್ತಿಗಳನ್ನು ಆ ನೂತನ
ಕವಿಯವರೆಗೂ ಕಳುಹಿರುವೆ.
ಇಂದಿನ ನನ್ನ ವಸಂತಗಾನ ನಿನ್ನ ವಸಂತ
ಸಮಯದ ಹೊಸದುಂಬಿಯ ಝೇಂಕಾರದಲ್ಲಿ
ಗಾನ ಮಾಧುರ್ಯದಲ್ಲಿ, ಚಿಗುರು–ತಳಿರೆಲ
ವಳ್ಳಿಗಳ ಮರ್ಮರದಲ್ಲಿ, ನಿನ್ನ ಹೃದಯ
ಸ್ಪಂದನದಲ್ಲಿ ದನಿಗೂಡಲಿ.
ಇಂದಿನಿಂದ ನೂರು ವರುಷಗಳ ಅನಂತರ....

ಆಜಿಹತೇ ಶತ ವರುಷ ಪರೇ

*

ಏಳು, ಬಾ, ಓ ಕವಿಯೆ
        ಇದೆಯೆ ಪ್ರಾಣದಿ ಚೇತನ
ಅಂತರಂಗದಿ ಚಿಂತನ ?
ಬಗೆಯೊಳಿರ್ದೊಡೆ ಸ್ಪಂದನ,
ಅದನಿಂದು ಮರ್ತ್ಯದಲಿ ಒಡಮೂಡಿಸು
ಈ ನೆಲದೊಳದನಿಂದು ಅಮರಗೊಳಿಸು !

**Wings of Death**

ಕವೀಂದ್ರ ರವೀಂದ್ರರು

# ಕೊಳಲಿನಲಿ ಪ್ರಾಣ ತುಂಬಿದೆ

*

ನಾನು ಕೇವಲ ಈ ಕೊಳಲಿನಲಿ
ಪ್ರಾಣವನು ತುಂಬಿದೆ !
ವಿಚಿತ್ರವಾದ ನಿಃಸ್ವರ ಸ್ವರ
ವನು ಇದರ ರಂಧ್ರಗಳಲಿ
ಹಿಡಿದಿಡಲು ಪ್ರಯತ್ನಿಸಿದೆ !

ಧರಿತ್ರಿಯ ಮೂಲೆ ಮೂಲೆಯಲಿ
ಬೆಳಗಿನ ಸೂರ್ಯದೇವನ ಸ್ವರ್ಣ
ಕಿರಣಗಳು ಇಳಿದು ಬರುವಾಗ
ತೃಣ ತೃಣದಲಿ, ಅಂಕುರ ಅಂಕುರ
ಗಳಲಿ ನಿಶ್ಯಬ್ದ ಸ್ವರ ಸಂಗೀತ
ಸುತ್ತು ಹತ್ತುಕಡೆ ಗುಂಜಾರವ
ವೆಸಗುವಾಗ, ನಾನು ಆ ಸ್ವರ
ಸಂಗೀತವನೆ ಈ ಕೊಳಲಿನಲಿ
ಹಿಡಿದಿಡಲು ಪ್ರಯತ್ನಿಸಿದೆ !

ನಾನು ಕೇವಲ ಈ ಕೊಳಲಿನಲಿ
ಪ್ರಾಣವನು ತುಂಬಿದೆ !

*

ಎಚ್ಚರಾಗಿರಿ ಎಲ್ಲರೊಂದಿಗೆ
ಇಂದಿನೀ ಹೊಂಬೆಳಗಿಗೆ !
ವಿಶ್ವಜೀವನ ಹೃದಯ ಪ್ರಾಂಗಣ-
ದಲ್ಲಿ ನೂತನ ಭಾವರಿಂಗಣ,
ಉಳಿಸಿ ನಿಮ್ಮಯ ಹಿರಿಮೆಯ
ಗಳಿಸಿ ಶಾಶ್ವತ ಗರಿಮೆಯ !
ಬರಲಿ ವಿಶ್ವದ ಬದುಕು ಹೃದಯಕೆ
ಅರಿವಿನಕ್ಷಿ ಗವಾಕ್ಷಕೆ !

Wings of DEATH

## ಮೌನವಧು

*

ಓ ! ಶಿಲ್ಪ ಸುಂದರಿ.

ಅದೆಷ್ಟು ಶತ–ಸಹಸ್ರ ವರುಷಗಳಿಂದ
ನೀನು ದಿವಾ–ರಾತ್ರಿ ಇದೇ ರೀತಿ ಚಿರ ಏಕಾಕಿನಿ,
ಅನಾಸಕ್ತ, ಅನಶ್ವರ, ಸೌಂದರ್ಯ ಸುಷಮಾವತಿ
ತಪಸ್ವಿನಿಯ ತೆರದಿ ನಿಶ್ಚಲಳಾಗಿ
ನಿಂತಿದ್ದಿಯೆ !

ಸಂಸಾರದ ಸಮಸ್ತ ಕೋಲಾಹಲ ನಿನ್ನನು
ಆಘಾತಗೊಳಿಸುವಲ್ಲಿ ನಿಷ್ಫಲಗೊಂಡಿವೆ.
ಜಗತ್ತಿನ ಜನನ–ಮರಣ, ಸುಖ–ದುಃಖ,
ಬೆಳಗು–ಬೈಗುಗಳಿಂದ ನೀನು ಉದಾಸೀನ
ಳಾಗಿದ್ದಿಯೆ !

ನಿನ್ನ ಚರಣತಲದಲಿ ತಲೆವಾಗಿಸಿ
ನಿಂತಿರುವ ಮಹಾಕಾಲ ಉನ್ಮುಖ ಮುಗ್ಧ
ನೇತ್ರಗಳಿಂದ ಹಗಲು–ಇರುಳು ನಿನ್ನನು
ಕುರಿತೇ ಕೇಳುತ್ತಿದ್ದಾನೆ : ಹೇಳು....ಹೇಳು
ಚೆನ್ನೆ ಹೇಳು !

ಓ ! ಅನಂತ ಮೌನ ತಾಳಿರುವ ಮೌನವಧು
ಒಮ್ಮೆ, ಒಮ್ಮೆಯಾದರೂ ಮೌನ ಮುರಿದು
ಮಾತನಾಡು !

ಪ್ರಸ್ತರ ಮೂರ್ತಿ

## ನಾನು ಯಾತ್ರಿಕ

*

ನಾನು ಯಾತ್ರಿಕ !
ನನ್ನನು ಮನೆಯ ನಾಲ್ಕು ಗೋಡೆಗಳ
ಮಧ್ಯೆ ಬಂಧನದಲ್ಲಿರಿಸುವವರಾರು ?
ಗೀತೆಗಳನ್ನು ಪಾಡುತ್ತ ನಾನು
ಅನಂತ ಪಥದಲಿ ನಡೆದು ಹೋಗುತ್ತೇನೆ.
ನನ್ನ ದೇಹ-ದುರ್ಗದ ಸಮಸ್ತ್ರದ್ವಾರಗಳೂ
ತೆರೆದಿವೆ; ವಾಸನೆಯ ಲವಲೇಶವೂ
ನನ್ನನ್ನು ಪೀಡಿಸಲಾರವು.
ಹಾಗೆಂತಲೇ ನಾನೀಗ ಲೋಕ
ಲೋಕಾಂತರದಲಿ ಸ್ವಚ್ಛಂದವಾಗಿ
ವಿಹರಿಸುತ್ತಿದ್ದೇನೆ.
ಯಾವ ಸಂಜೆ ಯಾವ ಮನೆಯಲಿ
ನಾನು ವಿಶ್ರಮಿಸಬೇಕಾಗಿದೆಯೋ ಯಾರು
ಬಲ್ಲರು ?
ಅಲ್ಲಿ ಯಾವ ತಾರಕಾದ್ವೀಪ
ಉರಿಯುವುದೋ ಯಾರು ಬಲ್ಲರು ?
ಯಾವ ಕೋಮಲ ಕುಸುಮ
ತನ್ನ ಸೌರಭದಿಂದ ಮೃದುಲಪವನವನ್ನು
ಚಂಚಲಗೊಳಿಸುವುದೋ ಯಾರು ಬಲ್ಲರು ?
ಯಾವ ಸ್ನಿಗ್ಧ ನಯನಗಳು
ಅನಾದಿ ಕಾಲದಿಂದ ನನ್ನ ಪ್ರತೀಕ್ಷೆಯಲ್ಲಿರುವವೋ
ಯಾರು ಬಲ್ಲರು !

ಜಾತ್ರೀ ಆಮಿ ಓರೆ

# ನಿನ್ನ ವಾಣಿಯ ನಿನದ

*

ಎಲ್ಲಿಹುದು ಅವಮಾನ ಎಲ್ಲಿ ಪೀಡನೆಯು
ಆವ ಚಿತ್ತದಿ ಸಂಶಯದ ಕಾಳರಾತ್ರಿ
ಎಲ್ಲಿ ಕಾರಾಗೃಹವು ಎಲ್ಲಿಹುದು ಬಂಧನವು
ಆವ ಹೃದಯದಿ ನೂರು ನೂರು ಕ್ರಂದನವು
ಅಲ್ಲಿ ಓ ! ದೇವರೆ ನನ್ನ ಕರೆದೊಯ್ದು
ಅಲ್ಲಿಯೇ ನನಗೆಂದು ನಿನ್ನ ವಾಣಿಯ ನಿನದ
ನನಗಾಗಿ ಕೇಳಿಸಿದೆ !

Wings of Death

# ಪುಷ್ಪದ ಆತ್ಮ

*

ನಾನು ನನ್ನ ಭುಜಗಳಲಿ ಅದನು ಹಿಡಿದು
ಎದೆಗೆ ಅಪ್ಪಿಕೊಳ್ಳುತ್ತೇನೆ.
ನನ್ನ ಬೊಗಸೆಯಲಿ ಅದರ ಮುಖಕಮಲ
ತುಂಬಿಕೊಳ್ಳುತ್ತೇನೆ, ಅದರ ಮೃದುದುಟಿಯ
ಮುಗುಳು ನಗೆಯನು ಚುಂಬನದಿಂದ
ಕದಿಯುತ್ತೇನೆ, ಅದರ ನಯನ
ಸುಧೆಯಿಂದ ನನ್ನ ಕಣ್ಣಿನ ತೃಷೆ
ಕಳೆದುಕೊಳ್ಳುತ್ತೇನೆ.
ಹಾಗಿದ್ದರೂ ನಾನು ಅದನ್ನು ಪಡೆಯುತ್ತಿಲ್ಲ.
ಅದು ಸರಿಯೇ !
ನಭದ ನೀಲಿಮೆಯನು ಆಗಸದಿಂದ
ಯಾರು ಕದಿಯಬಲ್ಲರು ?
ಸೌಂದರ್ಯವನು ಭಾವನೆಯಿಂದ
ಹಿಡಿಯುವ ಎಲ್ಲ ಪ್ರಯತ್ನವೂ
ವಿಫಲವಾಗುತ್ತಿದೆ, ಕೇವಲ
ದೇಹದ ಪಂಜರ ಮಾತ್ರ ನನ್ನ
ಕೈಯಲ್ಲಿ ಉಳಿಯುತ್ತಿದೆ.
ಸೋತು ಶ್ರಾಂತನಾಗಿ ನಾನು ಮರಳಿ
ಬರುತ್ತೇನೆ.
ಕೇವಲ ಅದೃಶ್ಯ ಆತ್ಮ ಮಾತ್ರ
ಯಾವ ಹೂವನ್ನು ಸ್ಪರ್ಶಿಸಬಲ್ಲುದೋ
ಅಂಥದನ್ನು ಈ ಕೈಗಳಿಂದ ಹಿಡಿದಿಡಲು
ಹೇಗೆ ಸಾಧ್ಯ ?

ಫೂಲ-ಕೀ-ಆತ್ಮಾ

ಕವೀಂದ್ರ ರವೀಂದ್ರರು

# ವೈರಾಗ್ಯ

*

ಒಂದು ಗಹನ ಗಭೀರ ರಾತ್ರಿ ಸಂಸಾರ
ಪರಿತ್ಯಾಗ ಮಾಡಬೇಕೆನ್ನುವಾತ
ಯೋಚಿಸಿದ :
"ಸರಿ, ಇನ್ನು ಗೃಹತ್ಯಾಗ ಮಾಡಿ ಪ್ರಭುವಿನ
ಶೋಧನೆಯಲ್ಲಿ ಹೊರಟು ಹೋಗುತ್ತೇನೆ.
ಈ ಮಾಯೆ–ಮೋಹದಲ್ಲಿ ಇನ್ನುವರೆಗೂ
ನಾನು ಸಿಲುಕಿರುವಂತೆ ಮಾಡಿದವರು
ಯಾರೋ ?"
ಪ್ರಭು ಮೆಲ್ಲನೆ ಹೇಳಿದ ;
"ನಾನು."
ಆದರೆ ವೈರಾಗ್ಯ ತಾಳಿದ ಅವನಿಗೆ
ಕೇಳಿಸಲಿಲ್ಲ !
ಆಗ ಪ್ರಭುವಿನ ನಿಟ್ಟುಸಿರಿನಲ್ಲಿಯೇ
ಈ ಕೊರಗು ಮೂಡಿತು :
"ಓ ! ನನ್ನ ಸೇವಕ, ನನ್ನ ಶೋಧನೆಯಲ್ಲಿ
ನನ್ನನ್ನೇ ಬಿಟ್ಟು ಎಲ್ಲಿಗೆ ಹೋಗುತ್ತೀಯಾ ?"

ವೈರಾಗ್ಯ

# ಅಸಂತೋಷದ ಪ್ರಳಯ

*

ನನಗೀಗ ಜನತೆಯ ಮಧ್ಯ ಹೋಗಗೊಡು
ನನ್ನ ವಾಣಿಯಲಿ ಒಂದುವೇಳೆ ದುಃಖಕ್ಕೆ
ಅಭಿವ್ಯಕ್ತಿ ದೊರಕಿದರೆ, ಆಂತರ್ಯದ ಗಂಭೀರ
ಪಿಪಾಸೆ ಸುಪ್ತಿಯನು ತೊರೆದು ಜಾಗೃತ
ಗೊಂಡರೆ, ಅಮೃತ ಪ್ರಾಪ್ತಿಗಾಗಿ ಒಂದು
ವೇಳೆ ಪ್ರಾಣ ವ್ಯಾಕುಲಗೊಳುವುದಾದರೆ,
ಆಗಲೇ ಮಾತ್ರ ನನ್ನ ವಾಣಿ, ನನ್ನ ಗೀತ
ಧನ್ಯತೆ ಪಡೆಯುತ್ತದೆ, ಸಾರ್ಥಕತೆ
ಹೊಂದುತ್ತದೆ.

ಆಗ...................
ಅಸಂತೋಷದ ಪ್ರಳಯವಾಗುತ್ತದೆ.

**Wings of Death**

## ಸ್ಪರ್ಶ

*

ಒಮ್ಮೆಲೆ ತನ್ನ ನೀಳ ಸೆರಗಿನ ಸ್ಪರ್ಶ ನೀಡುತ್ತ
ಅವಳು ಬಲು ಹತ್ತಿರದಿಂದ ಹೊರಟು ಹೋದಳು !
ನಾನು ಅವಳನ್ನು ಒಂದೇ ಮಗ್ಗಲಿನಿಂದ ನೋಡಿದೆ
ಕಂಪನ ತುಂಬಿದ ಆ ಸ್ಪರ್ಶ, ಸೆರಗಿನ
ಮಿಂಚು ಕುಣಿತದೊಂದಿಗೆ ಚಿಮ್ಮಿ
ಭಾವದಲಿ ವಿಲೀನಗೊಂಡಿತು !
ಹೃದಯ ವನದಲಿ ಒಂದು ಅಜ್ಞಾತ ಮಿಡಿತ
ಮಿಡಿಯಿತು !
ಪುಷ್ಪವನಗಲಿದ ಪಕಳೆ ಗಾಳಿಯಲಿ
ಹಾರಿ ಬಯಲಲಿ ವಿಲೀನ ಗೊಳುವೊಲು
ಆ ಸ್ಪರ್ಶ ನನ್ನನು ತಟ್ಟಿ ಮರುಕ್ಷಣದಲಿ
ಅದೃಶ್ಯವಾಯಿತು !
ಕೊಳಲಿನ ಮಂಜುಳ ರವದಂತೆ, ಪುಷ್ಪದ
ಮಾದಕತೆ ಗಾಳಿಯಲಿ ತುಂಬಿಕೊಳುವಂತೆ
ಈಗಲೂ ನನ್ನ ಹೃದಯ ಆ ಸ್ಪರ್ಶದ
ಅನುಭವ ಪಡೆಯುತಿದೆ !
ಆ ಸ್ಪರ್ಶ ಆಕೆಯ ಕೋಮಲತೆಯ ದೇಹದ
ಯಾವ ವ್ಯಾಕುಲಗೊಂಡ ನಿಃಶ್ವಾಸವಾಗಿತ್ತೋ;
ಆಕೆಯ ಹೃದಯದ ಯಾವ ರಹಸ್ಯಮಯ
ಸಂದೇಶವಾಗಿತ್ತೊ!
ಆಕೆಯ ಬಯಕೆಗಳ ಮೂರ್ತಿಮತ್ತಾದ
ಯಾವ ರಹಸ್ಯಪೂರ್ಣ ಕಥೆಯನ್ನು
ಹೇಳಿ ಹೋಯಿತೋ !

ಆಂಚಲಕಾ ಸ್ಪರ್ಶ

## ಉದಯಗಿರಿಯ ಶಿಖರದೆಡೆಗೆ

*

ನವಜೀವನದ ಈ ಯಾತ್ರೆಯಲಿ ನನ್ನ
ಲಲಾಟದ ಮೇಲೆ ಅರುಣಾಲೋಕ
ಜಯತಿಲಕವನಿಟ್ಟಿದೆ.

ಅಸ್ತಮಹಾಸಾಗರದ ತಟದಿಂದ ಉದಯ
ಗಿರಿಯ ಶಿಖರದೆಡೆಗೆ ನಾನು ಅನಂತ
ಪ್ರಣಾಮಗಳನು ಕಳಿಸಿದ್ದೇನೆ.

ನನ್ನೆದುರಿನಲಿದೆ ಅನಿರ್ವಚನೀಯ
ಜ್ಯೋತಿರ್ಮಯ ಭವಿಷ್ಯ, ಅಶೋಕ,
ಅಭಯ.

Wings of Death

ಕವೀಂದ್ರ ರವೀಂದ್ರರು

## ಮಾನಸಿ

*

ನಾರಿ ! ನೀನು ಕೇವಲ ವಿಧಾತನ ಕೃತಿಮಾತ್ರವಲ್ಲ !
        ತನ್ನ ಅಂತರ್ಯದ ಸೌಂದರ್ಯ ಸುಧೆಯಿಂದ
ಪುರುಷನೂ ನಿನ್ನ ಸೃಷ್ಟಿಗೈಯುತ್ತಾನೆ !
ಕವಿಗಣ ತಮ್ಮ ಸುವರ್ಣಮಯ ಉಪಮೆಗಳ
ಸೂತ್ರಗಳಿಂದ ನಿನ್ನ ಉಡುಗೆ ನೆಯ್ಯುತ್ತದೆ !
ಶಿಲ್ಪಿ ತನ್ನ ಸೌಂದರ್ಯಮಯ ಕಲಾನೈಪುಣ್ಯ
        ದಿಂದ ನಿನ್ನ ಪ್ರತಿಮೆಯನ್ನು ಅಮರ-
ವಾಗಿಸುತ್ತಾನೆ !
ಕಡಲಿಂದ ಮುತ್ತು ನೆಲದಿಂದ ಚಿನ್ನ
        ಮಧುವನದಿಂದ ಅಗಣಿತ ಕುಸುಮ
ಗಳನಾಯ್ದು ತಂದು ಪುರುಷ ನಿನ್ನನ್ನು
ಮತ್ತೆ ಮತ್ತೆ ರೂಪಿಸುತ್ತಾನೆ; ಶೃಂಗರಿಸುತ್ತಾನೆ !
ಕಾಮಿನಿ ! ನೀನು ಅರ್ಧ ಭಾಗ ಮಾತ್ರ ಮಾನವಿ;
        ಉಳಿದುದೆಲ್ಲ ಕಲ್ಪನೆ !
ಮಾನಸಿ ! ನೀನು ಕೇವಲ ವಿಧಾತನಕೃತಿ ಮಾತ್ರವಲ್ಲ !
        ತನ್ನ ಅಂತರ್ಯದ ಸೌಂದರ್ಯ ಸುಧೆಯಿಂದ
ಪುರುಷನೂ ನಿನ್ನ ಸೃಷ್ಟಿಗೈಯುತ್ತಾನೆ !

ಮಾನಸಿ



ಕವೀಂದ್ರ ರವೀಂದ್ರರು

## ನಾನು ಪೃಥಿವಿಯ ಶುಭಕವಿ

*

ಈ ಧರಿತ್ರಿಯ ಮೂಲೆ ಮೂಲೆಗೆ
        ಸ್ನೇಹ ಮೈತ್ರಿಯ ಎಲ್ಲ ನಿಲುವಿಗೆ
ಯಾವ ಧ್ವನಿಯೇ ಹೊಮ್ಮಲಿ,
ಯಾವ ಸ್ವರವೇ ಚಿಮ್ಮಲಿ,
ಆ ಕ್ಷಣವೆ ಮೂಡುವುದು,
ಪಡಿದನಿಯು ಸ್ಫುರಿಸುವುದು
ಈ ಅನಂತದ ಕೊಳಲಲಿ
ನನ್ನ ಕೊರಲ ಗಾನದಿ
        ನಾನು ಪೃಥಿವಿಯ ಶುಭಕವಿ !

**Wings of Death**

## ಸೋಮರ್ಮಡಿಯ ಹೂ

*

ಸಖಿ! ಏನು, ಅವರು ಪ್ರತಿದಿನವೂ ಇದೇ
ರೀತಿ ಬಂದು ಹೋಗುವರೆ?
ನೀನು ಹೋಗು, ನನ್ನೀ ಸೋಮರ್ಮಡಿಯ ಹೂ
ಅವರಿಗೆ ತಲುಪಿಸು!
"ಯಾರು ಕೊಟ್ಟರು? ಯಾವ ಮಧುವನದ
ಪುಷ್ಪವಿದು?" ಎಂದು ಕೇಳಿದ್ದಾದರೆ
ನನ್ನಾಣೆ, ನನ್ನ ಹೆಸರು, ಇನ್ನೇನನ್ನೂ
ಅವರಿಗೆ ಹೇಳಬೇಡ!
ಸಖಿ! ಆ ಗಿಡದಡಿಯಲಿ, ಆ ಹುಡಿಯಲ್ಲಿಯೇ
ಅವರು ಕೂಡುತ್ತಾರೆ, ಆದುದರಿಂದ
ಹೋಗು, ಆ ಬಕುಲ ಪುಷ್ಪಗಳ
ಆಸನ ಹಾಕು!
ತಮ್ಮ ಕಾರುಣ್ಯಮಯ ಮತ್ತು ತೇಜಃಪುಂಜ
ಕಂಗಳಿಂದ ನನ್ನ ಮನದಲಿ ವಿಚಿತ್ರ
ಕರುಣೆಯನು ಜಾಗೃತಗೊಳಿಸಿದ್ದಾರೆ.
ಏನನ್ನೋ ಹೇಳಬೇಕೆಂದು ಬಯಸುತ್ತಿರು
ವಂತೆ ಕಾಣುತ್ತದೆ–ಅವರು,
ಆದರೆ ಅವರು ಏನನ್ನೂ ಹೇಳಲೊಲ್ಲರು!
ಸಖಿ! ಏನು ಅವರು ಪ್ರತಿ ದಿನವೂ ಇದೇ
ರೀತಿ ಬಂದು ಹೋಗುವರೆ?
ನೀನು ಹೋಗು, ನನ್ನೀ ಸೋಮರ್ಮಡಿಯ ಹೂ
ಅವರಿಗೆ ತಲುಪಿಸು!

ಕವೀಂದ್ರ ರವೀಂದ್ರರು

# ಪ್ರಭಾತ ದರ್ಶನ

*

ನೀನು ಮೌನ ತಾಳಿದೊಡೆ
        ನಿನ್ನ ಮಹಾ ಮೌನವನೆ
ನನ್ನ ಹೃದಯದಲಿ ತುಂಬಿಕೊಳುವೆ !
ನಾನು ಶಾಂತಳಾಗಿ, ಸಹನಶೀಲೆಯಾಗಿ
ನಕ್ಷತ್ರಗಳ ನೀಲಾಂಜನದಿಂದ ತಲೆವಾಗಿರುವ
ರಜನಿಯೊಲು ಬರುವ ಬೆಳಗಿನ ನಿರೀಕ್ಷೆಗೈವೆ !

ಬೆಳಗಿನ ಮಹಾ ದರುಶನದೊಂದಿಗೆ
        ಈ ಕತ್ತಲು ಕಳೆದು ಹೋಗಿ, ಆಕಾಶದಲಿ
ಪ್ರಕಾಶದ ಸ್ವರ್ಣ ಸಮುದ್ರದಹಾಗೆ ನಿನ್ನ
ಮಧುರ ಧ್ವನಿ ತುಂಬುತಿದೆ !
ಆಗ........ನಿನ್ನ ವಾಣಿ ಪಕ್ಷಿಗಳ
        ಕಲಕಲ ಕೂಜನದಲಿ, ವನ-ನಿಕುಂಜಗಳಲಿ
ತುಟಿ ಅರಳಿಸುವ ಹೂಗಳಲಿ
ನಿನ್ನ ಸುಸ್ವರ ಪ್ರಸ್ಫುಟಿತಗೊಳುವುದನು
ನೋಡುವೆ !

ನೀನು ಮೌನ ತಾಳಿದೊಡೆ
        ನಿನ್ನ ಮಹಾ ಮೌನವನೆ
ನನ್ನ ಹೃದಯದಲಿ ತುಂಬಿಕೊಳುವೆ !

ಓ ಗೋ ಮೌನ ! ನಾ ಜದಿ ಕವ್ಯೋ

# ಕಮಲ ಪುಷ್ಪ

*

ಅಗಸ್ಟದ ಚಳಿರಾತ್ರಿಯಲಿ
ಶಿಶಿರ ಋತುವಿನ ನಿಷ್ಠುರ ಆಘಾತದಿ
ಸಮಸ್ತ ಕಮಲಪುಷ್ಪ ನಾಶವಾಗಿದ್ದವು !
ಸುದಾಸಮಾಲಿಯು ವನದಲಿಹ ಕೆರೆಯಲಿ
ಅದು ಹೇಗೋ ಕಮಲವೊಂದು ಹುಟ್ಟಿಬಂತು !

ಸಮಯಾತೀತವಾದ ಆ ಕಮಲ ಪುಷ್ಪವನು
ಮಾರಲೆಂದು ಅರಮನೆಯ ಬಾಗಿಲಬಳಿ
ಹೋಗಿ ಅರಸರ ದರ್ಶನಕಾಗಿ ಪ್ರಾರ್ಥಿಸಿದ
ಅಷ್ಟರಲಿ ಅವನ ಕೈಯಲಿದ್ದ ಹೂವನುಕಂಡು
ಆನಂದದಿ ಪುಲಕಿತನಾಗಿ
ಓರ್ವ ಪಥಿಕ ನುಡಿದ :
"ಋತು ಮಾನವನುಮೀರಿ ಹುಟ್ಟಿಹ ಈ ಕಮಲ,
ನಾನಿದನು ಕೊಳ್ಳುವೆ, ಇದಕೆಷ್ಟು ಬೆಲೆ ?"
ಮಾಲಿ ನುಡಿದ :
"ಸಹಸ್ರಸ್ವರ್ಣ ನಾಣ್ಯಗಳ ಪಡೆಯುವ ಆಶೆ"
ಪಥಿಕ, ಕೇಳಿದಷ್ಟನ್ನು ಕೊಡಲು ಸಮ್ಮತಿಸಿದ.

ಅದೇ ಸಮಯದಲಿ, ಸಮಸ್ತ ಪರಿವಾರದೊಂದಿಗೆ
ಪೂಜೆಯ ವಿಪುಲ ಸಾಮಗ್ರಿಯೊಂದಿಗೆ
ಹೊರಬಂದ ಮಹಾರಾಜ
ಪ್ರಸನ್ನಚಿತ್ತರಾಗಿ ನಡೆದಿದ್ದರು
ಬುದ್ಧ ದರ್ಶನಕಾಗಿ !

ಮಾಲಿಯ ಕೈಯಲಿದ್ದ ಸುಂದರ
ಕಮಲ ಪುಷ್ಪವನು ಕಂಡ ಅವರು-
"ಇದಕೆಷ್ಟು ಬೆಲೆ? ಇದನಕೊಂಡು
ಭಗವಂತನ ಚರಣಕರ್ಪಿಸುವೆ"
ಎಂದು ಕೇಳಿದರು.

ಆಗ ಮಾಲಿ–
"ಹೇ! ಪ್ರಭು ಒಂದು ಸಹಸ್ರ–ಸ್ವರ್ಣ
ಮುದ್ರೆಗಳಿಗೆ ಈ ಮಹಾನುಭಾವರು
ಕೊಂಡಿಹರು" ಎಂದು ಹೇಳಿದ!

"ನಾನು ಹತ್ತು ಸಹಸ್ರ ಕೊಡುವೆ"
ಪೃಥ್ವಿಯ ಸ್ವಾಮಿ ನುಡಿದ!
"ಇಪ್ಪತ್ತು ಸಹಸ್ರ ಕೊಡುವೆ"
ಪಥಿಕ ಆತುರದಿ ಕೇಳಿದ!

ರಾಜ ಅದಕ್ಕೂ ಹೆಚ್ಚು ಕೇಳಿದ,
ಪಥಿಕ ಅದಕ್ಕೂ ಹೆಚ್ಚುಬೆಲೆ ಏರಿಸಿದ.
ಯಾರೂ ಸೋಲನ್ನೊಪ್ಪಲು ಸಿದ್ಧವಾಗಲಿಲ್ಲ!
ಕ್ರಮಕ್ರಮದಿ ಕಮಲದ ಬೆಲೆ

ಏರುತ್ತಲೇ ಇತ್ತು.
ಮಾಲಿ ಯೋಚಿಸಿದ!

"ಯಾವುದಕ್ಕಾಗಿ ಈ ಈರ್ವರೂ
ಸ್ಪೈರ್ಧೆ ನಡೆಸಿರುವರೋ
ಈ ಅಮೌಲ್ಯ ಹೂವನ್ನೇ
ಭಗವಂತನ ಚರಣ ಕಮಲಗಳಿಗೆ
ಅರ್ಪಿಸುವ ಭಾಗ್ಯ, ನನಗಿಂದು
ತಪ್ಪಿದರೆ ಇನ್ನೆಂದೂ ಸಿಕ್ಕದು"ಎಂದು.

ಈ ವಿಚಾರ ಹೊಳೆದ ಕೂಡಲೇ
ಮಾಲಿ ಈರ್ವರಿಗೂ ಕೈಜೋಡಿಸಿ-
"ದಯದೋರಿ ನನ್ನನ್ನು ಕ್ಷಮಿಸಿ
ಈ ಹೂವನ್ನು ಮಾರುವ ಇಚ್ಛೆ ನನಗಿಲ್ಲ"
ಎಂದು ನಮ್ರನಾಗಿ ಹೇಳಿದ.
ಹೀಗೆ ಹೇಳಿದ ಅವನು ನೇರವಾಗಿ
ಅಲ್ಲಿಗೆ ಹೋದ–
ಎಲ್ಲಿ ಭಗವಂತನಾದ ಬುದ್ಧ
ಸಮುಜ್ವಲ ಕಾನನದಲಿ–
ಪ್ರಸನ್ನ ಪ್ರಶಾಂತ ಮನಸ್ಕನಾಗಿ
ನಿರಂಜನ ಆನಂದ ಮೂರುತಿ
ಪದ್ಮಾಸೀನನಾಗಿ ಕುಳಿತಿದ್ದನೋ
ಅಲ್ಲಿಗೆ ಹೋದ.
ಆತನ ದೃಷ್ಟಿಯಿಂದ ಶಾಂತಿಸಾಗರ
ಪ್ರವಹಿಸುತ್ತಿತ್ತು !
ಅಧರ ಪಕಳೆಗಳು ಅರಳಿದ್ದವು !
ಕರುಣೆಯು, ಮುಗುಳ್ನಗೆಯ
ಅಮೃತಜ್ಯೋತಿ ಬೆಳಗುತ್ತಿತ್ತು !
ಸುದಾಸ ನೋಡುತ್ತಲೇ ಇದ್ದ–
ಅನಿಮಿಷನಾಗಿ, ಮಂತ್ರಮುಗ್ಧನಾಗಿ !
ಒಮ್ಮೆಲೇ ಸಾಷ್ಟಾಂಗವೆರಗಿ
ಪ್ರಣಾಮುಗೈದು, ಕಮಲಪುಷ್ಪವನು
ಪ್ರಭುವಿನ ಶ್ರೀಪಾದದ ಮೇಲೆ ಇರಿಸಿದ
ಅವನ ಬದುಕೇ ಸಾರ್ಥಕ್ಯಪಡೆದ ಅನುಭವ ಅವನದು.
ಅಮೃತವರ್ಷಗರೆದ ಹಾಗೆ

ಬುದ್ಧದೇವ ಮಂದಸ್ಮಿತದಿ ಕೇಳಿದ–
"ಹೇಳು ವತ್ಸ, ನಿನ್ನ ಪ್ರಾರ್ಥನೆ ಏನು ಹೇಳು ?"
ಭಾವನೆಯ ಆಳದಲ್ಲಿ ಮುಳುಗಿದ್ದ
ಸುದಾಸ ನುಡಿದ :
"ಪ್ರಭು, ನನಗೇನೊಂದೂ ಬೇಡ,
ಆದರೆ ಒಂದು, ಒಂದನು ಮಾತ್ರ ಬೇಡುವೆ–
ಅದು ನಿನ್ನ ಚರಣ ಧೂಳಿ !"

# ಬೆಳಗಿನ ಚಂದಿರ

*

ಬೆಳಗಿನಲಿ ಉದಯಿಸಿ ಬರುವ
ಸೂರ್ಯನಿಂದ ತನ್ನ ಪ್ರಕಾಶ
ನಾಯವಾಗುವುದೆಂಬುದನು ಅರಿತೂ
ಬೆಳಗಿನ ಚಂದಿರ ಶಾಂತ ಹಾಗೂ
ಭೃತ್ಯನಾಗಿ ಹೀಗೆ ಹೇಳಿದ :
"ಅಸ್ತ-ಸಿಂಧುವಿನ ತಟದಲಿ
ನಿಂತು ಅದೆಷ್ಟೋ ಕಾಲದಿಂದ
ನಿನ್ನ ಪ್ರತೀಕ್ಷೆಯಲ್ಲಿದ್ದೇನೆ-ಓ ! ಸೂರ್ಯದೇವ
ನೀನು ಉದಯಿಸಿ ಬಂದ ಕೂಡಲೇ
ನಿನಗೆ ಪ್ರಣಾಮ ಸಲ್ಲಿಸುತ್ತ
ಇಲ್ಲಿಂದ ಹೋಗಬೇಕೆಂದಿದ್ದೇನೆ
ಓ ! ಸೂರ್ಯದೇವ !"

ಪ್ರಭಾತೇರ ಚಾಂದ



ಕವೀಂದ್ರ ರವೀಂದ್ರರು

# ನಾನು ಅಂದೇ ಜನ್ಮವೆತ್ತಿರೆ....

*

ನಾನು ಅಂದೇ ಜನ್ಮವೆತ್ತಿರೆ ಕಾಳಿದಾಸನ ಕಾಲದಲ್ಲಿ
ಮೆರೆಯುತ್ತಿದ್ದೆನು ಮತ್ತೆ ಹತ್ತನೆ ರತ್ನಶ್ರೀ
ನವರತ್ನಗಳ ಆ ಮಾಲೆಯಲ್ಲಿ
ಸ್ತುತಿಗೈಯುತ ಒಂದೆ ನುಡಿಯಲಿ
ಪಡೆಯುತಿದ್ದೆನು ಸ್ಥಾನವನು ಆ ಸಾರ್ವಭೌಮರ ಮುಡಿಯಲಿ
ನಾನು ಅಂದೇ ಜನ್ಮವೆತ್ತಿರೆ ಕಾಳಿದಾಸನ ಕಾಲದಲ್ಲಿ !

*

ಉಜ್ಜಯನಿಯ ಘನ ಮೌನವನಗಳಲಿ
ಕಾಡಿನ ಉಡಿಯಲಿ
ಅರಮನೆ ಮೆರೆದಿರೆ,
ಉಸುಕಿನ ದಂಡೆಯಲಿ
ಸಂಪಗೆ ಸೊಂಪಿನಲಿ
ಬೈಗಿನ ಹೊಂಬಣ್ಣದ ಸುವಿಲಾಸದಿ
ರಸಿಕರ ನೆರವಿಯು ಕೂಡಿರಲು
ಲೌಕಿಕ ಲೀಲೆಯ ಜಾಲವ ಕರಗಿಸಿ
ಕೊರಲಲಿ ಕಲರವ ತುಂಬುತಲಿದ್ದೆ
ಮಂದ ಮಂದವಹ ತಾಲ ಗತಿಗಳಲಿ
ಜೀವನಗಂಗೆಯ ಹರಿಸುತಲಿದ್ದೆ
ನಾನು ಅಂದೇ ಜನ್ಮವೆತ್ತಿರೆ ಕಾಳಿದಾಸನ ಕಾಲದಲ್ಲಿ

*

ಎಳ್ಳು ನೀರನು ಬಿಟ್ಟು ಚಿಂತೆಗೆ
ಮೆಲ್ಲನೆಯೆ ಮೆಲ್ಲಡಿಗಳಿಡುತಲಿ
ಸಾವು ನೋವುಗಳಿಲ್ಲವೆನುವೊಲು

ಸಾವಧಾನದಿ ಬಾಳುತಿದ್ದೆ
ಎಲ್ಲ ಋತುಗಳ ಸೊಗವ ಸವಿಯುತ
ಪದರು ಪದರಲಿ ಪ್ರೇಮ ಹೊಮ್ಮಿಸಿ
ಸ್ವರ್ಗ ಭಾಗ್ಯವ ಕಾವ್ಯದಂಗದಿ ತುಂಬುತಿದ್ದೆ
ನಾನು ಅಂದೇ ಜನ್ಮವೆತ್ತಿರೆ ಕಾಳಿದಾಸನ ಕಾಲದಲ್ಲಿ !

*

ವಿರಹದುಃಖಗಳ ತೆರೆ ತೆರೆ ನಿರ್ಮಿಸಿ
ಅಶ್ರುಜಲದಿ ನದನದಿಗಳ ಹರಿಸುತ
ಮಂದ ಮಂದ ಗತಿಗಳಲಿ ರಚಿಸಿ
ಜೀವನದ ಕರುಣ ಕಥೆಯ
ಆಷಾಢದಲ್ಲಿ ಒಟ್ಟಯಿಸಿ ಬರುವ ಮೇಘದೊಲು
ಮನವು ತುಂಬಿ
ಬದುಕಿನಲ್ಲಿ ಸೋಲಿಲ್ಲವೆನಿಸಿ
ಚಿಂತನೆಯ ಫಲದಿ ನಂಬಿ
ಪ್ರಿಯೆಯ ಹೆಜ್ಜೆ ಒಡಮೂಡುವಲ್ಲಿ
ಆನಂದ ವೃಕ್ಷ ಚಿಗುರೆ,
ಬಕುಲ ನಗಲು ಕುಲುಕುಲನೆ
ಪ್ರಿಯೆಯ ಮೊಗದಲ್ಲಿ ಹೊಮ್ಮಿ ಮದಿರೆ
ಪ್ರಿಯ ಸಖಿಯರ ಸ್ನೇಹಾಂಕಿತ
ಛಂದೋಗತಿಗಳ ಕಲರವದಿ
ತಣ್ಣ ತಣ್ಣನೆಯ ಮಳಲು,
ಮೃದುಲ ಕೊಳದಲ್ಲಿ ಹಂಸೆಯುಲಿಯೆ
ಮಂದಾಲಿಕೆ ಅದೊ ಒಬ್ಬಳ ಹೆಸರು,
ಚಿತ್ರಲೇಖೆ ಮಗುದೊಬ್ಬಳ ಕುಸುರು
ಮಂಜುಳೆ, ಮಂಜರಿ, ಝೇಂಕೃತಿಗೊಡುವೊಲು;
ದವನದ ಹುಣ್ಣಿಮೆ ತಿಂಗಳ ಹೊಳೆಯಲಿ
ಮಂದ ಮಂದ ಮಕರಂದದ ಸುಳಿಯಲಿ

ಕವೀಂದ್ರ ರವೀಂದ್ರರು

ಕೆಳೆಕೆಳೆ ಕೆಲೆದಿರೆ ಉಲ್ಲಸದಿ
ನೀಳ ನೀಲ ಕಬರೀ ಭರದಂಗದಿ ರತ್ನಪದಕವಿರಿಸಿ
ಮುಂಗುರುಳಲಿ ಹೊಂಗೇದಗೆ ಹೊಂದಿಸಿ
ಕಿವಿಯಲಿ ಶಿರೀಷ ಪುಷ್ಪ ಶೋಭಿಸಿ
ಮೇಘದೊಲು ಹರಡಿದೆ ಬೆನ್ನತುಂಬ
ಗುಲಾಬಿ ಗಂಧದಿ ತೊಯ್ದು ಕೇಶರಾಶಿ
ಅದಕೆ ಬಿಸಿಲಹೊಗೆಯನು ನೀಡುತಿಹರು ಚೆಲುವಚನ್ನೆಯರು
ಪುಷ್ಪಗಳ ಶುಭ್ರರೇಣು
ಚೆಲು ಮೊಗದ ತುಂಬ ತುಂಬ
ಹಬ್ಬಿದೆ ಹತ್ತು ದಿಕ್ಕಿಗೂ ಗಂಧ ಗಂಧ !
ನಾನು ಅಂದೇ ಜನ್ಮವೆತ್ತಿರೆ ಕಾಳಿದಾಸನ ಕಾಲದಲ್ಲಿ !

ಉಸ್ ಸಮಯ

## ಗ್ರಂಥಋಣ :

* The Future Poetry
  –Sri AuroBindo
* Tagore Centenary Souvenir
  Edited by : Sri Dewan Ram Parkash
* Rabindranath Tagore
  –Krishna Kripalani
* History of Bengali Literature
  –Dr. Sukumar Sen
* The Philosophy of Rabindranath Tagore
  –Benoy Gopal Ray
* The Later Poems of Tagore
  –Sisirkumar Ghose
* ಕವಿಯ ಕೃತಿಗಳು
  (ಬಂಗಾಳಿ ಹಾಗೂ ಉರ್ದು, ಇಂಗ್ಲೀಷ, ಹಿಂದೀ ಭಾಷೆಯಲ್ಲಿಯ ಅನುವಾದಗಳು)
* ಶ್ರೀ ಅರವಿಂದರ ಒಂದು ಲೇಖನ (ಹಿಂದೀ)
* ಮೇರಿ ಆತ್ಮ ಕಥಾ (ಹಿಂದೀ)
  —ರವೀಂದ್ರನಾಥ ಠಾಕೂರ

****

## ಈ ಲೇಖಕರ ಇತರ ಕೃತಿಗಳು :

**ಕಾವ್ಯ**

ಚೈತ್ರಾಕ್ಷಿ
ನೀ ರುದ್ರನಾಗು !
ಗಾಳಿ-ಗಂಧ [ಅಚ್ಚಿನಲ್ಲಿ]

**ಕಥೆ**

ಚಾಕ್ಲೇಟ ಮತ್ತು ಇತರ ಕಥೆಗಳು
ಕಾದಂಬರಿಯ ಕೊನೆಯ ಪುಟ [ಅಚ್ಚಿನಲ್ಲಿ]
ಗುಲಾಬಿಯ ಬೇಗಂ (ಅಚ್ಚಿನಲ್ಲಿ)

**ಪ್ರಬಂಧ**

ಕವಿ-ಕಾವ್ಯ-ಕಲ್ಪನೆ
ಕವೀಂದ್ರ ರವೀಂದ್ರರು
ಕವಿ-ಕಾವ್ಯ-ಕಲ್ಪನೆ [ಸಂಪುಟ 2 ಅಚ್ಚಿನಲ್ಲಿ]
ಐವರು ಉರ್ದು ಕವಿಗಳು [ಅಚ್ಚಿನಲ್ಲಿ]
ಪ್ರೊ. ದೇವೇಂದ್ರ ಕುಮಾರ ಹಕಾರಿ, ಪಂಚಾಕ್ಷರಿ ಹಿರೇಮಠ.

**ಕಾದಂಬರಿ**

ಮುಗ್ಗ ಚೆಲ್ಲದ ಬೆಳಕು
ದರೋಡೆಗಾರನ ಮಗ

**ರೇಡಿಯೋ ರೂಪಕ**

ಆತ ಮತ್ತೆ ಬರಲಿಲ್ಲ [ಅಚ್ಚಿನಲ್ಲಿ]

**ಸಂಪಾದನೆ**

ವಿಭೂತಿ [800 ಪುಟದ ಬೃಹದ್ ಗ್ರಂಥ]
ಭಾವೆಯುವರ ಭೂದಾನ
ಆರ್. ಸಿ. ಭೂಸನೂರಮಠ (ಕವಿ-ಕಾವ್ಯ ಪರಿಚಯ)

**ಪತ್ರ ಸಾಹಿತ್ಯ**

ಈ ಬದುಕು ಬಂಗಾರ [ಅಚ್ಚಿನಲ್ಲಿ]

**ಚರಿತ್ರೆ**

ಪ್ರಣವ ಪುರುಷ [ಅಚ್ಚಿನಲ್ಲಿ]

| Ticket No. | Issue Date | Return Date | Ticket No. | Issue Date | Return Date |
|---|---|---|---|---|---|
| | | | | | |
| | | | | | |

# Kavindra Ravindraru

In this small book 'Kavindra Raveendraru', Shri Panchakshari Hiremath presents a scholarly essay giving a critical appreciation of Tagore's poetry in general and in the latter half of the book he presents adaptations of a few selected poems of Tagore. As one reads the book, one feels the charm of Tagore's poetry as one would enjoy the beauty of a vast vista of scenic beauty from a distance and then the reader is led into the realm of Tagore's Poetry and made to stand face to face with some of his most beautiful creations. As we read these poems we feel the impact of Tagore's, love of life, its joys and sorrows; his love of the earth; love of God and all his wonderful creation and the serenity of his outlook on life and death. There is no room for sorrow, distress or doubt in this world. Everything is so calm, so serene and so beautiful. Who would not like to tarry for a while in this wonderful realm! In his scholarly essay Shri Panchakshari Hiremath has highlighted the striking qualities of Tagore's Poetry. His prose has all the charm of poetry. In this writing, we find an understanding study of Tagore, a deep contemplation of his ideas and an ability to express these is a beautiful poetic style. This little book which impresses one by the beauty of its style and by its scholarly writing is, I am sure, a valuable addition to Tagore literature in Kannada.

KARNATAK UNIVERSITY
DHARWAR

SADASHIVA WODEYAR



ಮಾರಾಟಗಾರರು :